ಕಲ್ಯಾಣ ಕಿರಣ

ಮಾರ್ಚ್-2010

ಬೆಲೆ-10ರೂ.



ಶೂನ್ಯಪೀಠಾಧೀಶ ಅಲ್ಲಮ ಪ್ರಭುದೇವರು



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಸಂಪುಟ-40	ಬಸವ ಶಕೆ - 876	ಆಜೀವ ಸದಸ್ಯತ್ವ ರೂ. 1000/-
ಸಂಚಿಕೆ - 3	ಮಾರ್ಚ್-2010	ವಾರ್ಷಿಕ ಚಂದಾ ರೂ. 100/-

ಅಲ್ಲಮ ಪ್ರಭು ಜೋಗುಳ

ಜೋ ಜೋ ಜೋ ಕಂದ ಅಲ್ಲಮ ಪ್ರಭು ಚಂದ್ರ
ಜೋ ಮುತ್ತಿನಾನಂದ ವದನಾರವಿಂದ । ಜೋ ಜೋ । ॥ ಪ ॥

ಭವ ತಿಮಿರ ತೊಲಗಿಸಲು ಭುವಿಗೆ ಮತ್ತವತರಿಸಿ
ಸುವಿವೇಕಯುತ ಮಾತೆ ಸುಜ್ಞಾನಿ ಗರ್ಭದಿ
ಶಿವ ಜ್ಞಾನಿ ನಿರಹಂಕಾರನ ಕಣ್ಮಣಿ ನೀನಾಗಿ
ಭವಿವೊಡೆದು ಬೆಳಗಿದೆ ಬಾಲ ತರಣಿಯ ತೆರದಿ॥ । ಜೋ ಜೋ ।

ಚೈತ್ರ ಮಾಸದ ಸೊಬಗು ಕುಡಿವೊಡದು ನಗುತಿರೆ
ಮಿತ್ರ ಕಳಕಂಠವು ಮಾಮರದಿ ಹಾಡುತಿರೆ। ವಿ
ಚಿತ್ರ ವರ್ಣವ ತಳೆವುತ್ತ ಧರೆ ಇರೆ
ಚೈತ್ರ ಯುಗಾದಿಯ ದಿನದಂದು ಇಳೆಗಿಳಿದೆ॥ । ಜೋ ಜೋ ।

ತಾಯ್ಮಡಿಲ ಸುಮವಾಗಿ ತೊಟ್ಟಿಲ ಚಿಟ್ಟಾಗಿ
ಮಾಯೆಯ ಗೆಲಿದು ವಿರತಿಯ ವಿಭುವಾಗಿ
ಗುರು ಅನುಮಿಷರಿಂದ ದೃಷ್ಟಿ ದೀಕ್ಷೆಯ ಪಡೆದು
ಸ್ವಯ ಜ್ಞಾನಿ ತಾನಾಗಿ ಮೆರೆದಂಥ ಯೋಗಿ ॥ । ಜೋ ಜೋ ।

ಅನುಭವ ಮಂಟಪದ ಆಧಾರ ತಾನಾಗಿ
ಅನುಭಾವ ನಿಧಿಯಾಗಿ ಅಮರ ಕೀರುತಿಯಾಗಿ
ಶೂನ್ಯ ಪೀಠವ ಏರ್ದ ಪ್ರಥಮ ಜಗದ್ಗುರುವಾಗಿ
ಮಾನ್ಯತೆಯ ಪಡೆದ ಜಂಗಮ ಜ್ಯೋತಿ ॥ । ಜೋ ಜೋ ।

ಹರಿವ ನದಿಯೊಲು ಚರಿಸಿ ಬಸವ ಧರ್ಮವ ಬೆಳೆಸಿ
ಕರುಣಾಕರ ನಿಲುವಿನಿಂ ಭಕ್ತರ ಉದ್ಧರಿಸಿ
ವಚನ ವಾಙ್ಮಯ ನಿಧಿಯ ವೃದ್ಧಿಸಿದ ಜ್ಞಾನಿ
ಸಚ್ಚಿದಾನಂದನ ನೆಚ್ಚಿನ ಕಂದಾ ॥ । ಜೋ ಜೋ ।

- ಮಾತಾಜಿ

ಬಸವ ವಾಣಿ

ಹೊನ್ನಿನ ಅಪ್ಯಾಯನಕ್ಕೆ ಬೋಳಾದವನಲ್ಲ
ಮಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಲಿಂಗದೇವರಲ್ಲಿ ಎನಗಾರು ಇಲ್ಲವೆಂದು ಬೋಳಾದನೆನ್ನ ಪ್ರಭುದೇವರು

★ ಕಲ್ಯಾಣ ಕಿರಣ ★

ಕಿರಣಗನ್ನಡಿ



ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ ತತ್ವಜ್ಞಾನ ಅಭ್ಯಸಿಸುತ್ತಿರುವಾಗ ಅವರು ಬರೆದ **"ಬಸವ ತತ್ವ ದರ್ಶನ"** ಎಂಬ ೯೦೦ ಪುಟಗಳ ಕೃತಿ ಅವರಿಗೇ ಪಠ್ಯಪುಸ್ತಕವಾಗಿ ಬಂದಿದ್ದು ಪೂಜ್ಯರ ಕೀರ್ತಿಗೆ ಕಳಸಪ್ರಾಯವಾಗಿದೆ. ಇಂತಹ ಜ್ಞಾನ ನಿಧಿ

ಪೂಜ್ಯ ಮಾತಾಜಿಯವರಿಗೆ 65ನೆಯ ವರ್ಷದ ಜನ್ಮದಿನದ ಭಕ್ತಿಪೂರ್ವಕ ಶುಭಾಶಯಗಳು

ಶುಭಾಶಯ ಕೋರುವವರು:

ಸಂಸ್ಥೆಯ ಎಲ್ಲಾ ಜಂಗಮ ಮೂರ್ತಿಗಳು ಹಾಗೂ
ರಾಷ್ಟ್ರೀಯ ಬಸವ ದಳಗಳು

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492

ವಚನ ಪ್ರಭೆ: - ಮಾತಾಜಿ

ಗುರು ಲಿಂಗ ಜಂಗಮದ ಕಾಯಕ ಮತ್ತು ಚರಸೇವೆ

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು
ಜಂಗಮವಾದರೂ ಕಾಯಕದಿಂದವೆ ತನ್ನವೇಷದ ಪಾಶ ಹರಿವುದು
ಗುರುವಾದರೂ ಚರ ಸೇವೆಯ ಮಾಡಬೇಕು.
ಲಿಂಗವಾದರೂ ಚರ ಸೇವೆಯ ಮಾಡಬೇಕು.
ಜಂಗಮವಾದರೂ ಚರ ಸೇವೆಯ ಮಾಡಬೇಕು.
ಇದು ಚಂದೇಶ್ವರಲಿಂಗದ ಅರಿವು ಕೇಳಾ ಪ್ರಭುವೆ!

ಶರಣ .ನುಲಿಯ ಚಂದಯ್ಯನವರ ಅಮೂಲ್ಯ ವಚನಗಳಲ್ಲಿ ಇದು ಬಹಳ ಮುಖ್ಯವಾದುದು. ಸಾಮಾನ್ಯವಾಗಿ ಭಕ್ತರು ಅರ್ಥಾತ್ ಗೃಹಸ್ಥರು ಕಾಯಕ ಅವಲಂಬಿಗಳಾಗಿ ಬದುಕು ಮಾಡುತ್ತಾರೆ. ಭಿಕ್ಷಾಟನೆ ಕಾಯಕದ ಧರ್ಮವಾದ ಲಿಂಗಾಯತದಲ್ಲಿ ನಿಷಿದ್ಧ. (ದುರ್ದೈವವೆಂದರೆ ಜಂಗಮವು ಜಾತಿಯಾಗಿ ವಿಕೃತಗೊಂಡಿರುವುದೇ ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಭಿಕ್ಷಾಟನೆ ಅಯ್ಯನವರ ನಿತ್ಯ ಕರ್ಮವಾಗಿದೆ. ಭಿಕ್ಷಾಟನೆ ಇಲ್ಲದಿದ್ದರೆ ಅವರು ಬದುಕುವುದು ಹೇಗೆ? ಎಂಬ ಪ್ರಶ್ನೆಗೆ ಮುಂದೆ ಬರೆಯುತ್ತೇನೆ. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ ಇಲ್ಲದ ಅಯ್ಯಾಚಾರ ಎಂಬುದನ್ನು ಅಳವಡಿಸಲಾಗಿದೆಯಲ್ಲದೆ, ಅಯ್ಯಾಚಾರ ಆದ ಮೇಲೆ ಜೋಳಿಗೆ ಹಾಕಿ ಭಿಕ್ಷೆಬೇಡುವ ಸಂಪ್ರದಾಯ ಶುರು ಮಾಡಲಾಗಿದೆ.)

ಮೇಲ್ಕಂಡ ವಚನದಲ್ಲಿ, ಗುರುವಾದರೂ ಕಾಯಕದಿಂದ ಜೀವನ್ಮುಕ್ತಿ ಎಂದು ಚಂದಯ್ಯನವರು ವಚನ ಸಂವಿಧಾನದ ಒಂದು ಸೂತ್ರವನ್ನು ಕೊಡುತ್ತಾರೆ. ಗುರುವಿನ ಕಾಯಕವೇನು? ಧರ್ಮಬೋಧೆ. ಸುಡುವ ಗುಣದಿಂದ ಒಂದು ವಸ್ತುವು ಬೆಂಕಿ ಎನ್ನಿಸಿಕೊಳ್ಳುವಂತೆ, ಅರಳುವ ಗುಣದಿಂದ ವಸ್ತುವು ಹೂವು ಎನಿಸಿಕೊಳ್ಳುವಂತೆ ಗುರುವಿಗೆ ಗುರುತ್ವ ಬರುವುದು ಬೋಧಿಸುವ ಕಾಯಕದಿಂದ. ಬೋಧೆ ಮಾಡಬೇಕಾದರೆ ಗುರುವು ಅಧ್ಯಯನ ಮಾಡುವುದು ಅಗತ್ಯವಿರುತ್ತದೆ. ಹೀಗಾಗಿ ಗುರುವಿನ ಜ್ಞಾನದ ಕಕ್ಷೆ ವಿಸ್ತಾರಗೊಳ್ಳುತ್ತದೆ. ಅಧ್ಯಯನ ಮಾಡದ ಗುರುವು ಮೂಢಮತಿಯಾಗುತ್ತಾನೆ. ಕೆಲವರು ಜ್ಞಾನಿಗಳು ಬಹಿರಂಗದ ಅಧ್ಯಯನವಿಲ್ಲದಿದ್ದರೂ ಚಿಂತನಮಗ್ನರಾಗಿರುವುದರಿಂದ ಅನೇಕ ಸ್ಫುರಣಗಳನ್ನು ಉಸುರುವರಲ್ಲದೆ ದೃಷ್ಟಾಂತಗಳ ಮೂಲಕ ದಿವ್ಯಜ್ಞಾನವನ್ನು ನೀಡುವರು.

ಲಿಂಗವಾದರೂ ಅವರ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು. ಈ ವಾಕ್ಯ ಬಹಳ ವಿಶೇಷವಲ್ಲವೆ? ಇಷ್ಟಲಿಂಗದ ಕೆಲಸ ಬರೀ ಪೂಜೆಗೊಳ್ಳುವುದು ಮಾತ್ರವಲ್ಲ ದೃಷ್ಟಿಯೋಗ ಅಥವಾ ತ್ರಾಟಕಯೋಗಕ್ಕೆ ಸಾಧನವಾಗುವುದು. ಹಾಗಾಗಬೇಕಾದರೆ ಇಷ್ಟಲಿಂಗದ ಗಾತ್ರ ತುಸು ದೊಡ್ಡದಿರಬೇಕು ಮತ್ತು ಕಂಥೆಯು ಹೊಳಪು ಉಳ್ಳದಾಗಿರಬೇಕು. ಇಲ್ಲದಿದ್ದರೆ ಅದು ಕೇವಲ ಶಿಲೆ ಎಂಬ ಬಿರುದಿಗೆ ಪಾತ್ರವಾಗುವುದು.

ಜಂಗಮ ಕಾಷಾಯ ವೇಷ ಧರಿಸಿದವನು. ಅವನು ಧರ್ಮ ಜಾಗೃತಿ, ಜ್ಞಾನಬೋಧೆ ಸಮಾಜ ಸಂಘಟನೆಯ ಕಾರ್ಯ ಮಾಡದಿದ್ದರೆ ಆಗ ಕೇವಲ ವೇಷಧಾರಿಯಾಗುವನೇ ವಿನಾ ನಿಜ ಜಂಗಮನಾಗನು. ಆಗ ಅವನು ಸಮಾಜದಿಂದ ಪಡೆಯುವ ಹಣ ಭಿಕ್ಷೆಯಾಗುವುದೇ ವಿನಾ ಕಾಯಕದ ಗಳಿಕೆ ಎನ್ನಿಸಿಕೊಳ್ಳುವುದಿಲ್ಲ. ಹೀಗೆ ಗುರು-ಲಿಂಗ-ಜಂಗಮರೂ ತಂತಮ್ಮ ಕಾಯಕ ಮಾಡಬೇಕು.

ಚರಸೇವೆ

ಗುರು ಲಿಂಗ ಜಂಗಮರು ಸೇವಾವ್ರತಧಾರಿಗಳು. ಕಾವಿ ಧರಿಸಿದ ಮಾತ್ರಕ್ಕೆ ತಾವು ಸೇವ್ಯರು, ಸಮಾಜವು ಸೇವಕ ಎಂಬ ಅಹಂಭಾವ ತಾಳಬಾರದು. ಭಕ್ತನಿಗಿಂತ ಗುರು ಜಂಗಮರು ಶ್ರೇಷ್ಠ. ಆದರೆ ವ್ಯಕ್ತಿ ಗುರು ಜಂಗಮರಿಗಿಂತಲೂ ಸಮಷ್ಟಿ ಜಂಗಮವಾದ ಸಮಾಜ ಹಿರಿದು. ಚರ ಸೇವೆ ಎಂದರೆ ಚೈತನ್ಯಾತ್ಮರುಗಳಾವ ಜೀವಾತ್ಮರ ಸೇವೆ. ಗುರು ಜಂಗಮರು ಸಹ ಚರ ಸೇವೆಯನ್ನು ಮಾಡಬೇಕು. ಅದನ್ನುನುಲಿಯ ಚಂದಯ್ಯನವರು ಮಾರ್ಮಿಕವಾಗಿ ಕಟ್ಟು ನಿಟ್ಟಾಗಿ ಹೇಳಿದ್ದಾರಲ್ಲದೆ ಲಿಂಗವಾದರೂ ಚರಸೇವೆಯನ್ನು ಮಾಡಬೇಕು ಎಂದು ಲಿಂಗದೇವನಿಗೂ ಕಟ್ಟಪ್ಪಣೆ ವಿಧಿಸುವ ಧಾರ್ಷ್ಟ್ಯ ತೋರಿದ್ದಾರೆ.

ಗುರುವು ಚರಸೇವೆಯ ಮಾಡುವುದು ಎಂದರೇನು? ಜ್ಞಾನ ಬೋಧೆಯ ಜೊತೆಗೆ ಗುರುವು ಸಮಾಜ ಸೇವೆಯನ್ನು ಹಮ್ಮಿಕೊಳ್ಳಬೇಕು. ಈ ದೃಷ್ಟಿಯಲ್ಲಿ ವಿದ್ಯಾ ಸಂಸ್ಥೆಗಳನ್ನು ತೆರೆದು ಮಠಾಧೀಶರು ಶಿಕ್ಷಣವನ್ನು ನೀಡುವ ಮೂಲಕ ಚರ ಸೇವೆಯನ್ನು ಮಾಡುತ್ತಿದ್ದಾರೆ. ಆದರೆ ಇಲ್ಲೊಂದು ದೋಷವಿದೆ. ಒಂದನೆಯದಾಗಿ ತಮ್ಮ ಹಾಸ್ಟೆಲುಗಳಲ್ಲಿ ಓದುವವರಿಗೆ ಧಾರ್ಮಿಕ ಸಂಸ್ಕಾರ ನೀಡದೆ ಇರುವುದು. ಕ್ರೈಸ್ತ ಗುರುಗಳು ಕಲಿಸುವ ಶಾಲೆಗಳಲ್ಲಿ ಕ್ರೈಸ್ತರು ಮಾತ್ರವಲ್ಲ ಕ್ರೈಸ್ತೇತರರು ಸಹ ಕ್ರೈಸ್ತ ಧರ್ಮದ ಬಗ್ಗೆ ತಿಳಿದುಕೊಂಡು ಅಭಿಮಾನ ತಾಳುತ್ತಾರೆ. ನಮ್ಮ ಮಠಾಧೀಶರುಗಳು ನಡೆಸುವ ಎಷ್ಟೋ ಸಂಸ್ಥೆಗಳಲ್ಲಿ ಓದಿದವರು ಲಿಂಗಾಯತ ಧರ್ಮದ ಸಾಮಾನ್ಯ ಜ್ಞಾನ ಹೊಂದಿರುವುದಿಲ್ಲ. ಕ್ರೈಸ್ತ ಮಿಷನರಿಗಳು ನಡೆಸುವ ಆಸ್ಪತ್ರೆ ಮುಂತಾದ ಮಾನವೀಯ ಕೇಂದ್ರಗಳಲ್ಲಿ ಕೆಲಸ ಮಾಡುವ ಜನರಲ್ಲಿ ಅಪಾರವಾದ ಸೇವಾಭಾವ ಬೆಳೆದಿರುತ್ತದೆ. ಇದಕ್ಕೆ ಕಾರಣ ಅವರ ಧರ್ಮ ಗ್ರಂಥದ ನಿರಂತರ ಬೋಧನೆ.

"ಲಿಂಗವಾದರೂ ಚರಸೇವೆಯ ಮಾಡಬೇಕು" ಎಂಬುದು ಅತ್ಯಂತ ಆಶ್ಚರ್ಯಕಾರಕ ವಲ್ಲವೆ? ಒಂದನೆಯವಾಗಿ ದೇವಾದಿದೇವ ಲಿಂಗದೇವನು ತನಗೆ ಶರಣಾದ ಸದ್ಭಕ್ತರ ಯೋಗಕ್ಷೇಮ ನೋಡಿಕೊಳ್ಳುವುದು, ಅವರ ಇಷ್ಟಾರ್ಥ ಪೂರೈಸುವುದು ಅವನ ಕರ್ತವ್ಯ, ದೇವನು ಮಾಡಬಹುದಾದ ಚರಸೇವೆ. ಸೃಷ್ಟಿ ಲಿಂಗದೇವನ ಕೆಲಸವಾಗಿದ್ದರೆ ಇಷ್ಟಲಿಂಗದೇವನ ಕೆಲಸ ಸಮತಾವಾದವನ್ನು ಅನುಷ್ಠಾನಗೊಳಿಸುವುದು. ಅಂಗದ ಮೇಲೆ ಲಿಂಗದೇವನಿದ್ದವರನ್ನೆಲ್ಲ ಸಮಾನ ಭಾವದಿಂದ ಸಹೋದರತ್ವದಿಂದ ಅನುಯಾಯಿಗಳು ಕಾಣಬೇಕು. ಇದಕ್ಕೆ ನೆರವಾಗುವುದು ಇಷ್ಟಲಿಂಗವಲ್ಲವೆ?

ಜಂಗಮವಾದರೂ ಚರಸೇವೆಯ ಮಾಡಬೇಕು. ಲಿಂಗಾಯತ ಧರ್ಮದ ಈ ಕ್ರಿಯೆಯಿಂದಾಗಿಯೇ ಜಂಗಮ ವ್ಯವಸ್ಥೆ(Missionary System) ಬೆಳೆಯಿತು. ಶಾಲೆ ಮಠಗಳು ಹುಟ್ಟಿ ಎಲ್ಲರಿಗೂ ಶಿಕ್ಷಣ ಸಿಗುವಂತಾಯಿತು. ದಾಸೋಹ ಮಠಗಳು ಹುಟ್ಟಿ ಯಾತ್ರಿಕರು, ಪ್ರವಾಸಿಕರು, ಬಡವರಿಗೆ ಒಂದು ಹೊತ್ತಿನ ಊಟ ಸಿಗುವಂತಾಯಿತು. ಮಲೆಯ ಮಾದೇಶ್ವರ, ಸಿದ್ಧಲಿಂಗೇಶ್ವರ, ಮುಪ್ಪಿನ ಷಡಕ್ಷರಿ, ಗುರು ಮಲ್ಲೇಶ್ವರ, ಷಣ್ಮುಖ ಶಿವಯೋಗಿ ಮುಂತಾದ ಜಂಗಮ ಮೂರ್ತಿಗಳಿಂದ ಕಾಡು ಮೇಡುಗಳಲ್ಲಿ, ಗುಡ್ಡ ಗಾಡುಗಳಲ್ಲಿ ವಾಸ ಮಾಡುತ್ತಿದ್ದ ಆದಿವಾಸಿಗಳಿಗೆ ಲಿಂಗಾಯತ ಧರ್ಮವು ಪ್ರಾಪ್ತಿಯಾಗುವಂತಾಯಿತು. ಇದೆಲ್ಲವೂ ಚರಸೇವೆಯೆ!

ಈ ರೀತಿ ತಿಳಿದುಕೊಳ್ಳುವುದೇ ದಿವ್ಯಜ್ಞಾನ ಎಂದು ಚಂದಯ್ಯ ಶರಣರು ಹೇಳುತ್ತಾರೆ.

ಕಲ್ಯಾಣ ಕಿರಣದ ಪ್ರತಿಗಳು ಒಂದಕ್ಕಿಂತ ಹೆಚ್ಚಾಗಿ ಬರುತ್ತಿದ್ದರೆ ಅವನ್ನು, ತಿರಸ್ಕರಿಸಲಾಗಿದೆ ಎಂದು ಬರೆದು ವಾಪಸ್ಸು ಮಾಡಿರಿ.

ಪ್ರತಿಗಳು ಬರದೆ ಇದ್ದರೆ 080-23131476 ದೂರವಾಣಿಗಾಗಲಿ, ಮೊಬೈಲ್ 9481249857, 9036351066, 9620058492 ಈ ನಂಬರಿಗಾಗಲಿ ಫೋನ್ ಮಾಡಿರಿ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್

ಉಳವಿ ರಸ್ತೆ, ಧಾರವಾಡ ಸಂಸ್ಥೆಯಿಂದ



ಶರಣೋತ್ಸವ ಕಾರ್ಯಕ್ರಮ

2010, ಏಪ್ರಿಲ್ 10, 11 ಮತ್ತು 12 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ - ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ - ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ - ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದ್ದು 50 ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ

ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ ಈ ವರ್ಷದಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.10ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 5-30ರಿಂದ ಧರ್ಮಚಿಂತನಗೋಷ್ಠಿ. ದಿ. 11ರಂದು ಭಾನು(ದೇವ)ವಾರ ಧಾರವಾಡ ನಗರದಲ್ಲಿರುವ ಕಲಾಭವನದಲ್ಲಿ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಪಠಣ. ಸೋಮ(ಶಿವ) ವಾರ ದಿ.12ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 40ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ ,ಧಾರವಾಡ
ಶರಣ. ಎಸ್.ಎಲ್.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ
ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಪೀಠಾಧ್ಯಕ್ಷೆ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003
ದೂ: 0836-3204121

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದ ಮೇಲೆ

108 ಅಡಿ ಗುರು ಬಸವಣ್ಣನವರ ಪುತ್ಥಳಿ

ಧನ ಸಹಾಯಕ್ಕಾಗಿ ಬಿನ್ನಹ



ಬಸವ ಧರ್ಮ ಪೀಠದ ಶರಣ ಲೋಕದಲ್ಲಿ ತ್ವರಿತಗತಿಯಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಗಿರುವುದು ಸರ್ವ ವೇದ್ಯವಷ್ಟೆ. ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಕೆಲಸವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪೂರೈಸಿದ್ದು, ಇನ್ನು ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

1. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಅಲ್ಲದೆ ದಾನಿಗಳ ಅಥವಾ ಅವರು ಸೂಚಿಸಿದವರ ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.
2. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನ ಮೇಲೆ ಬರೆಸಲಾಗುವುದು.

ಈಗಾಗಲೇ ಅನೇಕರು ತಮ್ಮ ಶಕ್ತ್ಯಾನುಸಾರ ದೇಣಿಗೆ ಕೊಟ್ಟಿರಬಹುದು. ಕೆಲಸವು ಹಾಕಿಕೊಂಡ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಸಾಗುತ್ತಿರುವುದರಿಂದ ಈಗ ಕೊಟ್ಟವರು ಇನ್ನೂ ಹೆಚ್ಚಿನ ಮೊತ್ತವನ್ನು ಕೊಡಬಹುದು. ಮೂರ್ತಿಗೆ ಆಕಾರ ಕೊಡುವ ಕೆಲಸ ನಡೆದಿರುವುದರಿಂದ ಹಣವು ತ್ವರಿತಗತಿಯಲ್ಲಿ ಬೇಕಾಗಿದೆ.

ಸ್ವಯಂ ಪ್ರೇರಣೆಯಿಂದ ಕಟ್ಟಡ ನಿಧಿಗೆ ಶಕ್ತ್ಯಾನುಸಾರ ಮತ್ತು ಭಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು.

108 ಸೋಪಾನದ ಯೋಜನೆ

ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಮುಂಭಾಗದಲ್ಲಿ ಏರಲು, ಇಳಿಯಲು ಮೆಟ್ಟಲನ್ನು ಮಾಡಲಾಗುತ್ತಿದೆ. ಏರಲು 108 ಇಳಿಯಲು 108 ಹೀಗೆ ಒಟ್ಟು 216 ಸೋಪಾನ ಗಳಾಗುತ್ತವೆ. ಅಳತೆ 10 ಅಡಿ ಉದ್ದ, 8 ಅಂಗುಲ ಎತ್ತರ, 1 ಅಡಿ ಅಗಲ, ಈ ಮೆಟ್ಟಲುಗಳಿಗೆ ಗ್ರಾನೈಟನ್ನು ಹಾಕಿಸುವ ಅಪೇಕ್ಷೆ ಇದೆ. 8 ಅಂಗುಲ ಎತ್ತರದ ಕಲ್ಲಿನ ಮೇಲೆ ದಾನಿಗಳ ಹೆಸರನ್ನು ಕೆತ್ತಿಸಲಾಗುವುದು. ಈ ಸೋಪಾನ ಯೋಜನೆಗೆ ಒಂದು ಮೆಟ್ಟಲಿಗೆ 15000 (ಹದಿನೈದು ಸಾವಿರ) ಕೊಟ್ಟರೆ ಧನ ದಾಸೋಹಿಗಳ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗ ಬೇಕೆಂದು ಕೋರುತ್ತೇವೆ.

ನವಲಿಂಗ ಸ್ಥಾವರ

ಏರುವ ಮತ್ತು ಇಳಿಯುವ ಮೆಟ್ಟಲಿನ ಮಧ್ಯೆ ಸುಂದರವಾದ ನವಲಿಂಗ ಸ್ಥಾವರವನ್ನು ನಿರ್ಮಿಸಲಾಗುತ್ತಿದೆ. ಒಂಬತ್ತು ಕಟ್ಟೆಗಳ ಮೇಲೆ 9 ಕಮಲದ ಹೂವುಗಳು ಅರಳಲಿದ್ದು, ಆ ಹೂವುಗಳ ಮೇಲೆ 9 ಮಂಟಪಗಳ ನಿರ್ಮಾಣವಾಗಲಿದೆ. ಅವುಗಳಲ್ಲಿ 9 ಜನ ಶರಣರ ಮೂರ್ತಿಗಳನ್ನು ಇಡಲಾಗುವುದು.

ಶೂನ್ಯ ಪೀಠ ಪರಂಪರೆಯನ್ನು ಬಿಂಬಿಸಲಿರುವ ಈ ನವಲಿಂಗ ಸ್ಥಾವರದಲ್ಲಿ ಕೂರಿಸಲಾಗುವ 9 ಮೂರ್ತಿಗಳೆಂದರೆ, ಮೇಲಿನಿಂದ ಕೆಳಕ್ಕೆ

1. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು
2. ವೀರ ವಿರಾಗಿಣಿ ಅಕ್ಕಮಹಾದೇವಿ
3. ಚಿನ್ಮಯ ಜ್ಞಾನಿ ಚನ್ನಬಸವಣ್ಣ
4. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರ
5. ವೈರಾಗ್ಯನಿಧಿ ಮಲೆಯ ಮಾದೇಶ್ವರ
6. ನಿರಂಜನ ಮೂರ್ತಿ ಮನ್ಮಥಸ್ವಾಮಿ (ಮಹಾರಾಷ್ಟ್ರ)
7. ಯಡೆಯೂರು ಸಿದ್ಧಲಿಂಗೇಶ್ವರ
8. ಜೇವರ್ಗಿಯ ಷಣ್ಮುಖ ಶಿವಯೋಗಿ
9. ಬಸವ ಕಂದ ಲಿಂಗಾನಂದ ಸ್ವಾಮಿಗಳು

ನಂತರ ಎರಡೂ ಬದಿಯಲ್ಲಿ ಅಶ್ವಾರೂಢರಾಗಿರುವ ವಚನ ಸಾಹಿತ್ಯ ಸಂರಕ್ಷಕರಾದ ವೀರ ಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ವೀರ ಮಾತೆ ಅಕ್ಕನಾಗಲಾಂಬಿಕೆಯ ಮೂರ್ತಿಗಳು.

ನವ ಲಿಂಗ ಸ್ಥಾವರದ ಕಟ್ಟೆ, ಕಮಲ ಮಂಟಪ ಮತ್ತು ಶರಣರ ಮೂರ್ತಿ - ಎಲ್ಲಾ ಸೇರಿ ಒಂದೊಂದಕ್ಕೆ 4 ಲಕ್ಷ ರೂ ವೆಚ್ಚವಾಗುತ್ತದೆ. ಒಬ್ಬರು ಅಥವಾ ಇಬ್ಬರು ಭರಿಸಿದರೆ ದೊಡ್ಡದಾಗಿ ಹೆಸರು ಬರುತ್ತದೆ. ಇಲ್ಲದಿದ್ದರ ತಲಾ 50,000 (ಐವತ್ತು ಸಾವಿರ) ರೂ ಕೊಟ್ಟ 8 ಜನ ದಾನಿಗಳ ಹೆಸರಿನ ನಾಮಫಲಕಗಳನ್ನು ಗ್ರಾನೈಟನಲ್ಲಿ ಕೆತ್ತಿಸಿ ಒಂದೊಂದು ಹಂತಕ್ಕೆ ಹಾಕಲಾಗುವುದು.

ಕಲ್ಲಿನ ಬಾಗಿಲ ಚೌಕಟ್ಟು

ಲ್ಯಾಟರೈಟ್ ಕಲ್ಲಿನಲ್ಲಿ ಕೊರೆಸಲ್ಪಟ್ಟ ಬೃಹತ್ ಗವಿಯು ಅದ್ಭುತವಾಗಿ ಮೂಡಿ ಬಂದಿದ್ದು ಅವರ ಒಳಗೆ ಪುನಃ ಕೋವಿ(ಒಳ ಸುರಂಗ)ಗಳನ್ನು ಮಾಡಿ ಪ್ರಮುಖ ಶರಣ-ಶರಣೆಯರ ಮೂರ್ತಿಗಳನ್ನು ಕೂರಿಸಲಾಗಿದೆ. ಇನ್ನೂ ಕೆಲವು ಮೂರ್ತಿಗಳನ್ನು ಕೂರಿಸಿರುವ (ಮತ್ತು ಕೂರಿಸಲಿರುವ) ಸುರಂಗಗಳಿಗೆ ಕಲ್ಲಿನ ಬಾಗಿಲ ಚೌಕಟ್ಟನ್ನು ಶಿಲ್ಪಿಗಳಿಂದ ಕೆತ್ತಿಸಲಾಗಿದೆ; ಮತ್ತು ಕೆತ್ತಿಸಲಾಗುತ್ತಿದೆ. ಇಂಥ ಬಾಗಿಲ ಚೌಕಟ್ಟು ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ಆಗುತ್ತದೆ.

ಇದಕ್ಕೆ ಕೊಡುವ ದಾನಿಗಳಿಗೆ ಬಾಗಿಲ ಚೌಕಟ್ಟಿನ ಮೇಲೆ ಹೆಸರನ್ನು ಕೆತ್ತಿಸಲಾಗುತ್ತದೆ. ಇಂಥ ಬಾಗಿಲ ಚೌಕಟ್ಟುಗಳು ಕೇವಲ 20 ಮಾತ್ರ ಇವೆ. ಆದ್ದರಿಂದ ಧನ ದಾಸೋಹಿಗಳು ಬೇಗನೆ ತಮ್ಮ ಹೆಸರನ್ನು ತಿಳಿಸಬೇಕು.

ವಿ.ಸೂ : ಈ ಯೋಜನೆಗಳನ್ನು ಘೋಷಿಸುವ ಮೊದಲು (1-2-2010) ಅನೇಕರು 25000(ಇಪ್ಪತ್ತೈದು ಸಾವಿರ) ಮತ್ತು 15000 (ಹದಿನೈದು ಸಾವಿರ) ರೂಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಅವರು ಈ ಹಣವನ್ನು ಬಾಗಿಲ ಚೌಕಟ್ಟಿಗೆ ಮೆಟ್ಟಲು ಯೋಜನೆಗೆ ಬಳಸಿಕೊಳ್ಳಿರಿ ಎಂದು ತಿಳಿಸಬಾರದು. ಏಕೆಂದರೆ ಆ ಹಣವನ್ನು ಬೃಹತ್ ಮೂರ್ತಿಯ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ. ಈ ಯೋಜನೆಗೆ ಕೊಡಬೇಕೆನ್ನುವವರು ಹಣಕೊಡುವಾಗಲೇ ಉದ್ದೇಶವನ್ನು ತಿಳಿಸಬೇಕು.

ಶರಣ ಬಂಧುಗಳು ಲಕ್ಷ್ಯ ಕೊಟ್ಟು ಓದಿ ತಮ್ಮ ಶಕ್ತ್ಯಾನುಸಾರ ಯೋಜನೆಯನ್ನು ಆಯ್ಕೆ ಮಾಡಿಕೊಂಡು, ದೇಣಿಗೆಯನ್ನು ಕೊಟ್ಟು ಸಹಕರಿಸಬೇಕೆಂದು ಕೋರುತ್ತೇವೆ.

ಗುರು ಬಸವಣ್ಣನವರ ಜೀವನ ಚರಿತ್ರೆ, ಚಿತ್ರಣ

1. ಗುರು ಬಸವಣ್ಣನವರ 108 ಅಡಿ ಪುತ್ಥಳಿಗೆ 24 ಅಡಿ ಎತ್ತರದ ಅಡಿಪಾಯವಿದೆ. ಇಲ್ಲಿ ಧರ್ಮಪಿತರ ಜೀವನದ ಪ್ರಮುಖ ಘಟ್ಟಗಳನ್ನು ಮೂರ್ತಿಗಳ ಮೂಲಕ ಚಿತ್ರಿಸುವ ಯೋಜನೆ ಇದೆ. ಒಂದು ಅಂಕಣದಲ್ಲಿ ಒಂದು ಘಟನೆ ಅಥವಾ ಪ್ರಸಂಗವಿರುತ್ತದೆ. ಒಂದೊಂದು ಘಟನೆಯ ಚಿತ್ರಣಕ್ಕೆ ಒಂದೂವರೆ ಲಕ್ಷ ಖರ್ಚು ಬರಲಿದೆ. (ಮುರ್ಡೇಶ್ವರದಲ್ಲಿ ರಾವಣನ ಜೀವನದ ಪ್ರಸಂಗಗಳು, ಶಿವನ ಲೀಲೆಗಳನ್ನು ಚಿತ್ರಿಸಿರುವುದು ನಮ್ಮ ಯೋಜನೆಗೆ ಪ್ರೇರಣೆ) ಇದನ್ನು ಒಬ್ಬರೇ ದಾನಿಗಳು ವಹಿಸಿಕೊಳ್ಳಬಹುದು. ಅಥವಾ ಇಬ್ಬರು - ಮೂವರು ಸೇರಿ ವಹಿಸಿಕೊಳ್ಳಬಹುದು. ಅಥವಾ ಒಂದೊಂದು ರಾಷ್ಟ್ರೀಯ ಬಸವ ದಳದಿಂದ ಅಥವಾ ಒಂದೊಂದು ಊರಿನಿಂದ ಸಂಗ್ರಹಿಸಿ ದೇಣಿಗೆ ನೀಡಬಹುದು.

2. **ಶರಣ ಗ್ರಾಮ:** ವಿವಿಧ ಕಾಯಕದ ಶರಣರನ್ನು ಅವರ ಪರಿಸರದ ಜೊತೆಗೆ ಚಿತ್ರಿಸುವ ಕೆಲಸ ಆರಂಭವಾಗಿದೆ. ಒಬ್ಬ ಶರಣರ ಅಂಥ ಚಿತ್ರಣಕ್ಕೆ ಅಂದಾಜು 50,000 (ಐವತ್ತು ಸಾವಿರ) ರೂ ವೆಚ್ಚವಾಗುವುದು. ಕೊಟ್ಟವರ ಹೆಸರಿನ / ಊರಿನ ನಾಮಫಲಕವನ್ನು ಹಾಕಲಾಗುವುದು.

3. **ಅಕ್ಕಮಹಾದೇವಿ ಗವಿ :** ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಒಂದು ಬೃಹತ್ ಗವಿಯನ್ನು ಕೆತ್ತಿಸಲಾಗಿದ್ದು, ಇದರಲ್ಲಿ 30 ಜನ ವಚನಕಾರ್ತಿ ಶರಣೆಯರ ಮೂರ್ತಿಗಳನ್ನು ಕೂರಿಸುವ ಉದ್ದೇಶವಿದೆ. ಒಬ್ಬೊಬ್ಬ ಶರಣೆಯ ಮೂರ್ತಿಯನ್ನು ಆಕೆಯ ಪರಿಸರದೊಡನೆ ಚಿತ್ರಿಸಲು 25,000 (ಇಪ್ಪತ್ತೈದು ಸಾವಿರ) ರೂಗಳ ವೆಚ್ಚ ತಗುಲಲಿದೆ. ದಾನಿಗಳು ದೇಣಿಗೆ ಕೊಟ್ಟರೆ ಅಲ್ಲಿ ಅವರ ಹೆಸರಿನ ನಾಮಫಲಕವನ್ನು ಹಾಕಲಾಗುವುದು.

4. **ಸರೋವರ :** ಗುರು ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಒಂದು ಕೊಳವನ್ನು (ಅಂದಾಜು ವೆಚ್ಚ 5 ಲಕ್ಷ) ಮಾಡಿ, ಐಕ್ಯ ಮಂಟಪವನ್ನು (ಅಂದಾಜು ವೆಚ್ಚ 3 ಲಕ್ಷ) ನಿರ್ಮಿಸಲಾಗುತ್ತಿದೆ. ಇಡೀ ವೆಚ್ಚವನ್ನು ಒಬ್ಬರೇ ವಹಿಸಿಕೊಳ್ಳಬಹುದು. ಅಥವಾ ಇಬ್ಬರು ಪ್ರತ್ಯೇಕವಾಗಿ ವಹಿಸಿಕೊಳ್ಳಬಹುದು.

ಸಾಲದ ರೂಪದಲ್ಲಿ ಧನ ಸಹಾಯ

ಬೃಹತ್ ಪುತ್ಥಳಿಯ ಕೆಲಸವು ಬಹು ತೀವ್ರಗತಿಯಲ್ಲಿ ನಡೆದಿರುವ ಕಾರಣ ಹಣದ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ. ಈ ಹಿಂದೆ 2006ರಲ್ಲಿ ನವ ದೆಹಲಿಯಲ್ಲಿ (ಬಸವ ಮಂಟಪ) ಕಟ್ಟಡ ಖರೀದಿ ಮಾಡುವಾಗ ಶರಣ ಬಂಧುಗಳು ಸಾಲ ರೂಪದಲ್ಲಿ ಹಣವನ್ನು ಒದಗಿಸಿದರು. ಒಂದೂವರೆ ತಿಂಗಳಲ್ಲೇ ಸಾಲ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ಖರೀದಿಸಲಾಯಿತು. ಆ ಸಾಲದಲ್ಲಿ ಶೇಕಡಾ 80ರಷ್ಟು ತೀರಿಸಲಾಗಿದೆ. ಶರಣ ಬಂಧುಗಳ ಇಚ್ಛೆಯಂತೆ ಉಳಿದುದನ್ನು ಅವರು ಕೇಳಿದಾಗ ಕೊಡಲಾಗುವುದು. ಅದೇ ರೀತಿ ಈಗಲೂ ಶರಣ ಬಂಧುಗಳು ಸಾಲದ ರೂಪದಲ್ಲಿ ಬಸವ ಧರ್ಮ ಪೀಠ ಟ್ರಸ್ಟಿಗೆ ಹಣವನ್ನು ಕೊಡಬಹುದು. (ವಿ.ಸೂ: ಸಾಲದ ಹಣಕ್ಕೆ ರಸೀತಿ ಕೊಡಲಾಗುವುದು.) ಅದಕ್ಕೆ 12% ಬಡ್ಡಿಯನ್ನು ಸಹ ಕೊಡಲಾಗುವುದು. ತಮಗೆ ಹಣ ವಾಪಸ್ಸು ಬೇಕಾದಾಗ ಒಂದು ತಿಂಗಳು ಮೊದಲು ಬೇಡಿಕೆ ಸಲ್ಲಿಸಿದರೆ ವಾಪಸ್ಸು ನೀಡಲಾಗುವುದು. ಸಾಲ ನೀಡುವುದೂ ಸಹ ಉಪಕಾರದ ಕೆಲಸ ಎಂದು ಭಾವಿಸಿ, ಆರ್ಥಿಕ ಶಕ್ತಿ ಇರುವವರು ಸಾಲ ಕೊಡುವುದಕ್ಕೆ ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

☹ ಸಮಸ್ಯೆ ? - ಸಮಾಧಾನ ! ☺

ನಾಗರಾಜ ನಿಂಬರ್ಗಿ, ಘರಹತಾಬಾದ್, ಗುಲಬರ್ಗಾ.

? ಬಸವ ಕಲ್ಯಾಣದಲ್ಲಿ ಬಸವ ಧರ್ಮ ಪೀಠದ ಮಠಕ್ಕೆ ಹೋದಾಗ ಹೊಸದಾಗಿ ಮುದ್ರಣವಾದ ಸಪ್ತಗಣಾಧೀಶರ ಭಾವಚಿತ್ರ ತಂದೆ. ತುಂಬಾ ಸುಂದರವಾಗಿ ಬಂದಿದೆ. ಒಬ್ಬರು ಭಾವಚಿತ್ರ ಕಂಡು ಸಂತೋಷ ಪಟ್ಟರಾದರೂ 7 ಜನ ಶರಣರನ್ನು ಮಾತ್ರ ವಿಶೇಷವಾಗಿ ಗೌರವಿಸುವುದು ಸರಿಯಲ್ಲ; ನಮಗೆ ಎಲ್ಲ ಶರಣರೂ ಒಂದೆ ಎಂದರು. ಇದು ಸರಿಯೆ?

★ ಅವರ ಅಭಿಪ್ರಾಯ ತಪ್ಪು. ಒಂದು ಧರ್ಮದ ಉಗಮ ಮತ್ತು ಪ್ರಗತಿಯಲ್ಲಿ ಒಬ್ಬೊಬ್ಬರ ಪಾತ್ರವೂ ಬೇರೆ ಬೇರೆ ಇರುತ್ತದೆ. ಒಬ್ಬ ವ್ಯಕ್ತಿಗೆ ಕಣ್ಣು ಇಲ್ಲದಿದ್ದರೂ ಜೀವಿಸಬಲ್ಲ ಕುರುಡನಾಗಿ, ಕಾಲು ಇಲ್ಲದಿದ್ದರೂ ಬದುಕಬಲ್ಲ ಕುಂಟನಾಗಿ; ಆದರೆ ಹೃದಯವೇ ಇಲ್ಲದಿದ್ದರೆ ಬದುಕಲಾರ. ಹಾಗೆ ಗುರು ಬಸವಣ್ಣನವರು ಲಿಂಗಾಯತ ಧರ್ಮ ಪುರುಷನ ಹೃದಯವಿದ್ದಂತೆ. ಅವರಿಲ್ಲದಿದ್ದರೆ ಈ ಧರ್ಮ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಇನ್ನುಳಿದ 6 ಜನರ ಮಾತುಗಳು ಅರ್ಥಾತ್ ವಚನಾದೇಶ (Commandments) ವಚನ ಸಾಹಿತ್ಯ ಸಂವಿಧಾನದ ಸೂತ್ರಗಳು. ಅಕ್ಕನಾಗಲಾಂಬಿಕೆ, ಮಾಚಿದೇವರು ವಚನ ಸಾಹಿತ್ಯದ ರಕ್ಷಕರು. ಉಳಿದ ಶರಣರು ಬಸವಾದೇಶಗಳನ್ನು ಅಳವಡಿಸಿಕೊಂಡವರು. ಇದನ್ನು ನಾವು ಗುರುತಿಸಲೇಬೇಕಾಗುತ್ತದೆ.

ಚಂದ್ರಶೇಖರ ಬೆನಕಿನ, ಗುಲಬರ್ಗಾ.

? ಶ್ರೀ ರಂಗನಾಥ ದಿವಾಕರ ಅವರ ವಚನ ಶಾಸ್ತ್ರ ರಹಸ್ಯ ಓದುತ್ತಿದ್ದೆ. ಆ ಪುಸ್ತಕದ 3ನೆಯ ಆವೃತ್ತಿ 1952ರಲ್ಲಿ ಮುದ್ರಣಗೊಂಡಿದೆ. ಅದರಲ್ಲಿ ಇಷ್ಟಲಿಂಗ, ಗುರು, ಜಂಗಮ ಇವೆಲ್ಲವೂ ವೀರಶೈವದಲ್ಲಿ ಇವೆ. ಇವೆಲ್ಲ ಪರಿಕಲ್ಪನೆ ಬಸವ ಪೂರ್ವದಲ್ಲೇ ಇದ್ದವು ಎಂದು ಬರೆಯಲಾಗಿದೆ. ವಚನಗಳಲ್ಲಿ ನೋಡಿದರೆ ಗುರು ಬಸವಣ್ಣನವರೇ ಈ ಧರ್ಮದ ಆದ್ಯರು ಎಂದಿದೆ. ಹೀಗಾಗಿ ನನಗೆ ಬಹಳ ಗೊಂದಲ ಉಂಟಾಗಿದೆ.

★ ವೀರಶೈವವು ಬಸವ ಪೂರ್ವದ ಒಂದು ಪಂಥ. ಸಪ್ತ ಶೈವಗಳಲ್ಲಿ ಒಂದು. ವೀರಶೈವರು ಶಿವಲಿಂಗಪೂಜಕರಿದ್ದರು. ಇಷ್ಟಲಿಂಗವು ಬಂದುದೇ ಬಸವಣ್ಣನವರಿಂದ. ಕೆಲವರು ಮೂಢತನದಿಂದ, ಮತ್ತೆ ಕೆಲವರು ಮುಗ್ಧತೆಯಿಂದ, ಕಾಶೀನಾಥ ಶಾಸ್ತ್ರಿ ಮತ್ತು ಹಾನುಗಲ್ ಕುಮಾರ್ ಶ್ರೀಗಳು ಧೂರ್ತತೆಯಿಂದ ವೀರಶೈವ ಪದವನ್ನು ಲಿಂಗಾಯತ ಧರ್ಮಕ್ಕೆ ಅಂಟಿಸಿ ಗೊಂದಲ ಉಂಟು ಮಾಡಿದ್ದಾರೆ. ಗುರು ಬಸವಣ್ಣನವರಿಗೆ ಕೃತಕವಾಗಿ ಗುರುವನ್ನು ಆಧಾರವಿಲ್ಲದೆ ಸೃಷ್ಟಿಸಿದರು. ಗುರು ಬಸವಣ್ಣನವರಿಗೆ ಯಾರೂ ದೀಕ್ಷಾ ಗುರುವಿಲ್ಲ, ಯಾವ ಕಾವ್ಯಗಳಲ್ಲೂ ಗುರುವಿನಿಂದ ದೀಕ್ಷೆಯಾದ ಉಲ್ಲೇಖವಿಲ್ಲ. ಸೃಷ್ಟಿಕರ್ತ ಪರಮಾತ್ಮನೇ ಗುರು ಬಸವಣ್ಣನವರಿಗೆ ಜ್ಞಾನಗುರು ಮತ್ತು ದೀಕ್ಷಾಗುರು. ಈ ಬಗ್ಗೆ ನಾನು ಸ್ವಯಂಕೃತ ಬಸವಣ್ಣ ಎಂಬ ಸಾಧಾರಪೂರ್ವಕ ಗ್ರಂಥವನ್ನು ಪ್ರಕಟಿಸಿದ್ದೇನೆ. ವೀರಶೈವದಲ್ಲಿ ಅಷ್ಟಾವರಣ, ಪಂಚ ಆಚಾರ, ಷಟಸ್ಥಲಗಳ, ಇಷ್ಟಲಿಂಗದ ಪರಿಕಲ್ಪನೆ ಇಲ್ಲ. ಇವೆಲ್ಲ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ ಮಾತ್ರ ಇವೆ. ಒಂದು ವೇಳೆ ವೀರಶೈವದಲ್ಲಿ ಅವು ಇದ್ದುದೇ ಆದರೆ ಆಂಧ್ರ, ತಮಿಳು ನಾಡು, ಕೇರಳಗಳಲ್ಲಿರುವ -ಲಿಂಗಾಯತ ಧರ್ಮ ಹಾಗೂ ಸಾಹಿತ್ಯದ ಸಂಪರ್ಕವಿರದ ವೀರಶೈವರಿಗೂ ಈ ಪರಿಕಲ್ಪನೆ ಗೊತ್ತಿರಬೇಕಿತ್ತು. ಹಾಗಿಲ್ಲ; ಕರ್ನಾಟಕದ ಲಿಂಗಾಯತ ಸಮಾಜದಲ್ಲಿ ಮಾತ್ರ ಈ ತತ್ವಗಳು ಅರಿವು ಮತ್ತು ಆಚರಣೆಯಲ್ಲಿವೆ. ಇನ್ನೂ ಹೆಚ್ಚಿನ ವಿವರ ಬೇಕಾದಲ್ಲಿ ನಾನು ಬರೆದ "ಲಿಂಗಾಯತರು ವೀರಶೈವರಲ್ಲ" ಎಂಬ ಪುಸ್ತಕ ಓದಿರಿ.

ಬಸವ ಗಂಗೋತ್ರಿಯಲ್ಲಿ ಬಸವೋತ್ಸವ
- ಮೇ 25, 26 ಮತ್ತು 27ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತ್ರಿ ಆಶ್ರಮ" ಎಂಬ ಹೆಸರು ಹೊಂದಿದ್ದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ|| ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ -ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯಾದರೂ ಈ ವರ್ಷದಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ವೈಶಾಖ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು - ಹೀಗೆ 3 ದಿವಸಗಳ ಸಮಾವೇಶವನ್ನು ಮೇ ತಿಂಗಳಿನ ದಿ. 25, 26 ಮತ್ತು 27ರಂದು ಸಂಯೋಜಿಸಲಾಗಿದೆ. ದಿ. 25ರಂದು ಬೆಳಿಗ್ಗೆ 10-30ರಿಂದ ಬಸವೋತ್ಸವದ ಉದ್ಘಾಟನಾ ಸಮಾವೇಶ, ಸಂಜೆ -5-30ರಿಂದ ಧರ್ಮ ಚಿಂತನ ಗೋಷ್ಠಿ. ದಿ. 26ರಂದು ಬೆಳಿಗ್ಗೆ 8-30ಕ್ಕೆ 770 ಜನ ಶರಣರಿಂದ ಇಷ್ಟಲಿಂಗ ಪೂಜೆ, 11-30ಕ್ಕೆ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ, ಸಂಜೆ -5-30ರಿಂದ ಧರ್ಮ ಚಿಂತನಗೋಷ್ಠಿ, ದಿ. 27 ಪೌರ್ಣಿಮೆಯಂದು ಜಗದ್ಗುರು ಶ್ರೀ ಚನ್ನಬಸವೇಶ್ವರ ಜ್ಞಾನ ಪೀಠ ಸ್ಥಾಪನೆ ಮತ್ತು ಪೀಠಾರೋಹಣ. ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಅವರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ; ನಂತರ ಸಮಾರೋಪ ಸಮಾರಂಭ.

ಪೂಜ್ಯ ರಾಮದೇವ ಬಾಬಾ ಅವರಿಂದ ತರಬೇತಿ ಪಡೆದ ಮೈಸೂರಿನ ಪತಂಜಲಿ ಯೋಗಾಲಯದ ಶರಣ. ಮಧು ಅವರು ಪ್ರತಿ ದಿನ ಬೆಳಿಗ್ಗೆ 5 ರಿಂದ 6-30ರವರೆಗೆ ಪ್ರಾಣಾಯಾಮ, ಧ್ಯಾನ, ಯೋಗಾಸನದ ತರಬೇತಿಯನ್ನು 3 ದಿವಸಗಳ ಕಾಲ ನೀಡಲಿದ್ದಾರೆ.

ದಿ. 24-5-2010ರಿಂದ ದಿ. 28-5-2010ರ ಬೆಳಗಿನವರೆಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಬರಲಿರುವ ಶರಣ ಬಂಧುಗಳಿಗೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕ ರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದದ ವ್ಯವಸ್ಥೆಯನ್ನು ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

770 ಅಮರ ಗಣಂಗಳ ಸ್ಮರಣಾರ್ಥ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಮೇಲೆ ತಿಳಿಸಿದಂತೆ ದಿ. 26ರಂದು ಬೆಳಿಗ್ಗೆ 8-30ಕ್ಕೆ ಏರ್ಪಡಿಸಲಾಗಿದ್ದು ಪ್ರವೇಶ ಶುಲ್ಕ 100ರೂ. 250ರೂ ಮತ್ತು ಮೇಲೆ ಕೊಟ್ಟವರು ಇದಕ್ಕಾಗಿ ಪ್ರತ್ಯೇಕ ಶುಲ್ಕ ಕೊಡಬೇಕಾಗಿಲ್ಲ. ಇದರಿಂದ ಸಂಗ್ರಹವಾಗುವ ಹಣವನ್ನು ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ 108 ಅಡಿಯ ಬಸವ ಪುತ್ಥಳಿಗಾಗಿ ಬಳಸಲಾಗುವುದು.

ಬಸವೋತ್ಸವದ ಯಶಸ್ವಿಗಾಗಿ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆಯನ್ನು ನೀಡುವುದಲ್ಲದೆ ರಸೀತಿ ಪುಸ್ತಕಗಳನ್ನು ಪಡೆದುಕೊಂಡು ದೇಣಿಗೆಯನ್ನು ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ -ಧಾನ್ಯ, ಅಕ್ಕಿ- ಬೇಳೆ, ಬೆಲ್ಲ -ಸಕ್ಕರೆ, ತರಕಾರಿ ಇತ್ಯಾದಿ ವಸ್ತುಗಳನ್ನು ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ ರೂಟ್‌ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು

ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010

2010ರ ಮಾರ್ಚ್ -ಏಪ್ರಿಲ್- ಮೇ ತಿಂಗಳಲ್ಲಿ ಬರುವ ಹಬ್ಬ - ಹುಣ್ಣಿಮೆ - ಉತ್ಸವಗಳು

ಪೂಜ್ಯ ಮಾತಾಜಿಯವರ 65ನೆಯ ವರ್ಧಂತಿ (ಬೆಂಗಳೂರಿನ ಬಸವ ಮಂಟಪದಲ್ಲಿ)	-	ಮಾರ್ಚ್ 13
ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ಜಯಂತಿ ಯುಗಾದಿ	-	ಮಾರ್ಚ್ 16
ಅಲ್ಲಮಗಿರಿಯಲ್ಲಿ ಗಣ ಮೇಳ	-	ಮಾರ್ಚ್ 16
ಜಗನ್ಮಾತಾ ಅಕ್ಕಮಹಾದೇವಿ ಜಯಂತಿ	-	ಮಾರ್ಚ್ 16, 17, 18
ಬಸವ ಜಯಂತಿ (ಬಸವ ಮಂಟಪದಲ್ಲಿ)	-	ಮಾರ್ಚ್ 30
ಬಸವೋತ್ಸವ (ಬಸವ ಗಂಗೋತ್ರಿಯಲ್ಲಿ)	-	ಮೇ 16ರಂದು
ಬಸವ ಪೌರ್ಣಿಮೆ	-	ಮೇ 25, 26, 27ರಂದು
	-	ದಿ. 27-5-2010ರಂದು ಶ್ರೀ ಚನ್ನಬಸವೇಶ್ವರ ಜ್ಞಾನಪೀಠ ಸ್ಥಾಪನೆ ಮತ್ತು ಸಮಾರೋಪ ಸಮಾರಂಭ

(ಫೆಬ್ರವರಿ ಕಲ್ಯಾಣ ಕಿರಣದಲ್ಲಿ ಅಕ್ಕಮಹಾದೇವಿ ಜಯಂತಿಯ ನಿಮಿತ್ತ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ದಿ. 29, 30ರಂದು ವಿಶೇಷ ಕಾರ್ಯಕ್ರಮ ಎಂದು ತಿಳಿಸಲಾಗಿತ್ತು. ಅದು ಆರ್ಥಿಕ ವರ್ಷದ ಕೊನೆಯಾದ್ದರಿಂದ ಭಾಗವಹಿಸಿಲು ಬಹಳ ಜನರಿಗೆ ತೊಂದರೆಯಾಗುತ್ತದೆ ಎಂದು ಶರಣ ಬಂಧುಗಳಿಂದ ಒತ್ತಾಯ ಬಂದ ಕಾರಣ ಶರಣೋತ್ಸವ ಕಾರ್ಯಕ್ರಮದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ.

ಏಪ್ರಿಲ್ 10 ಶನಿವಾರ, ದಿ.11 ಭಾನುವಾರ, ದಿ. 12 ಸೋಮವಾರ ಕಾರ್ಯಕ್ರಮವನ್ನು ನಿಶ್ಚಯಿಸಲಾಗಿದೆ. ಈ ದಿನಾಂಕ ಬದಲಾವಣೆ ಗಮನಿಸಬೇಕಾಗಿ ಕೋರುತ್ತೇವೆ.

ಭಾಗ -19 - ಮಾತಾಜಿ

ಬಸವ ವಚನಾಮೃತ

345. ಉದರ ಪೋಷಕ

ಅರ್ಚಿಸಲರಿಯೆ, ಪೂಜಿಸಲರಿಯೆ,
ನಿಚ್ಚ ನಿಚ್ಚ ಶಿವರಾತ್ರಿಯ ನಾ ಮಾಡಲರಿಯೆ!
ಕಪ್ಪಡಿ ವೇಷದಿಂದಾನು ಬಂದಾಡುವೆ.
ಕಪ್ಪಡಿ ವೇಷದಿಂದ!
ಈಶ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ.
ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ.
ಲಿಂಗದೇವಾ,
ನಿಮ್ಮ ಲಾಂಛನವ ಧರಿಸಿಪ್ಪ ಉದರ ಪೋಷಕ ನಾನಯ್ಯಾ. - ಬ.ವ.ದೀ.343

ನಿಜವಾದ ಲಿಂಗಾಯತ ಧರ್ಮಾನುಯಾಯಿಯು ನಿತ್ಯವೂ ಅರ್ಚನೆಯನ್ನು ಮಾಡ ಬೇಕು. ಇಷ್ಟಲಿಂಗದ ಪೂಜೆ ಮಾಡಿ, ಸೃಷ್ಟಿಕರ್ತನ ಪ್ರಾರ್ಥನೆ, ಧ್ಯಾನಗಳನ್ನು ಮಾಡಬೇಕು. ಉಳಿದ ಜನರಂತೆ ವರ್ಷಕ್ಕೊಂದೇ ದಿನ ಶಿವರಾತ್ರಿ ಆಚರಿಸದೆ ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬೇಕು. ಇದನ್ನೇನೂ ಮಾಡದೆ ಕೆಲವರು ಹೊಟ್ಟೆಯ ಪಾಡಿಗಾಗಿ ಶಿವನ ವೇಷವನ್ನು ಧರಿಸಿ ಕೈಯಲ್ಲಿ ತ್ರಿಶೂಲ ಹಿಡಿದು ಅಲಂಕರಿಸಿದ ಎತ್ತಿನ ಮೇಲೆ ಬರುವರು. ಶಿವನಂತಹ ಮಹಾನುಭಾವನ ವ್ಯಕ್ತಿತ್ವಕ್ಕೆ ಚ್ಯುತಿ ತರುವ ಈ ವೇಷಧಾರಣೆ ಕೇವಲ ಉದರ ಪೋಷಣೆಗಾಗಿ. ಬಸವಣ್ಣನವರು ಬೇಡುತ್ತಾರೆ, "ದೇವಾ, ನನಗೆ ಇಂಥ ವೇಷಧಾರಣೆ ಬೇಡ. ನಾನು ಸದ್ಭಕ್ತರ ಮನೆಯ ಸೇವಕನಾಗಿ ಇರಬಯಸುತ್ತೇನೆ." ಧರ್ಮಪಿತ ಬಸವಣ್ಣನವರು ಅತ್ಯಂತ ವೈಚಾರಿಕ, ಪ್ರಗತಿಪರ ಧರ್ಮವನ್ನು ಕೊಟ್ಟರಾದರೂ ಅದರೊಳಕ್ಕೆ ಹಲವು ಬಗೆಯ ಜನರು ಸೇರಿಕೊಳ್ಳತೊಡಗಿದರು. ಕಪ್ಪಡಿಯ ವೇಷ ಧರಿಸಿ ತೋರಿಕೆಗೊಂದು ಇಷ್ಟಲಿಂಗ ಲಾಂಛನವ ಧರಿಸಿಕೊಂಡು ಜನರ ಬಳಿಗೆ ಬರುವುದನ್ನು ಕಂಡು ಗುರು ಬಸವಣ್ಣನವರು ವಿಷಾದವನ್ನು ವ್ಯಕ್ತಪಡಿಸುತ್ತಾರೆ.

346. ಉತ್ತಮ ಜಾತಿಯಲ್ಲಿ ಜನಿಸಿದ್ದಕ್ಕೆ ವಿಷಾದ

ಅಪ್ಪನು ಡೋಹಾರ ಕಕ್ಕಯ್ಯನಾಗಿ, ಮುತ್ತಯ್ಯ ಚನ್ನಯ್ಯನಾದಡೆ
ಆನು ಬದುಕೆನೆ?
ಮತ್ತಾಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್ಗುಣವ ನಾನರಿವೆನಯ್ಯಾ.
ಕಷ್ಟಜಾತಿಯ ಜನ್ಮದಲ್ಲಿ ಜನಿಸಿದೆ;
ಎನಗಿದು ವಿಧಿಯೆ! ಲಿಂಗದೇವಾ. - ಬ.ವ.ದೀ.344

ಸಾಮಾಜಿಕವಾಗಿ ಮೇಲು ಶ್ರೇಣಿಯಲ್ಲಿರುವ ಶೈವಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ ಅತ್ಯಂತ ದಯನೀಯ ಸ್ಥಿತಿಯಲ್ಲಿದ್ದ ದಲಿತರನ್ನು ಕಂಡರೆ ಗುರು ಬಸವಣ್ಣನವರಿಗೆ ಅತೀವ ಮರುಕ. ಅವರನ್ನು ಮೇಲಕ್ಕೆತ್ತಿ ಎಲ್ಲರಂತೆ ಸಾಮಾಜಿಕ ವ್ಯವಸ್ಥೆಯಲ್ಲಿ ಅವರೂ ಬೆರೆಯುವಂತಾಗ ಬೇಕೆಂಬ ಅದಮ್ಯ ಹಂಬಲ ಅವರದು. ಅವರ ಬಳಿಗೆ ಹೋದರೆ ಅವರೂ ನಂಬರು. ಮೇಲ್ಜಾತಿಯವರಿಂದ ಸಾಕಷ್ಟು ನೋವು, ಅಪಮಾನ ಹೊಂದಿರುವ ಅವರಲ್ಲಿ ಜನ್ಮದಿಂದ ಮೇಲ್ಜಾತಿಯವರಾದ ಗುರು ಬಸವಣ್ಣನವರನ್ನು ನಂಬಲು ಹಿಂಜರಿಕೆ. ಅದಕ್ಕಾಗಿ ಕಷ್ಟಜಾತಿಯ ಜನ್ಮದಲ್ಲಿ ಜನಿಸಿದೆ; ಎನಗಿದು ವಿಧಿಯೆ? ಎಂದು ಹಳಿದುಕೊಳ್ಳುತ್ತಾರೆ. ತಾವು ಶ್ರೇಷ್ಠ, ಶ್ರೇಷ್ಠ ಎಂಬ ಹಮ್ಮನ್ನು ಮೇಲರಿಮೆಯನ್ನು ಬೆಳೆಸಿಕೊಂಡು ವ್ಯಕ್ತಿತ್ವ ವಿನಾಶವನ್ನು ಮೇಲ್ಜಾತಿಯವರು ತಂದುಕೊಂಡರೆ, ನಾವು ಬಹಿಷ್ಕೃತರು ದೇವರ ಆರಾಧನೆಯಿಂದಲಾದರೂ ಮೇಲ್ಮಟ್ಟಕ್ಕೆ ಏರೋಣ ಎಂಬ ಕಳಕಳಿಯಿಂದ ಶ್ರಮಿಸಿ ಕೆಳಜಾತಿಯವರೆನ್ನಿಸಿಕೊಂಡ ಡೋಹರ,

ಮಾದಾರ, ಶ್ವಪಚ ಮುಂತಾದವರೇ ಭಕ್ತಿಮಾರ್ಗದಲ್ಲಿ ಮೇಲಕ್ಕೆ ಏರತೊಡಗಿದರು. ಅದನ್ನೇ ಗುರು ಬಸವಣ್ಣನವರು ಹೀಗೆ ಹೇಳುತ್ತಾರೆ :

ಚರ್ಮ ಹದ ಮಾಡುವ ಕಾಯಕದ ಕಕ್ಕಯ್ಯ ನನಗೆ ತಂದೆಯಾಗಿ, ಚೋಳರಾಜನ ಮನೆಯ ಕುದುರೆಯ ಲಾಯಕ್ಕೆ ಹುಲ್ಲು ಒದಗಿಸುವ ಚನ್ನಯ್ಯ ನನ್ನ ಮುತ್ತಜ್ಜನಾದರೆ ನನ್ನ ಪೂರ್ವಜಾತಿಯ ದೋಷವಳಿದು ನನಗೆ ಪುನರ್ಜನ್ಮ ಬಂದು ನಾನು ಬದುಕುತ್ತೇನೆ. ಶ್ವಪಚಯ್ಯನೆಂಬ ಒಬ್ಬ ದಲಿತ ಶರಣನ ಸನ್ನಿಧಿಯಲ್ಲಿ ಒಡನಾಡಿದರೆ ನಾನು ಭಕ್ತಿಯ ಸದ್ಗುಣವನ್ನು ಅರಿಯಬಲ್ಲೆ. ಮೇಲರಿಮೆಯ ಕಲ್ಮಶದಲ್ಲಿ ಹೊರಳಾಡುವ ಜಾತಿಯಲ್ಲಿ ಜನಿಸಿದೆ. ಲಿಂಗದೇವಾ, ಇದು ನನ್ನ ದುರಾದೃಷ್ಟವೇ ಸರಿ.

347. ಕಷ್ಟತನದ ಹೊರೆ ಮೇಲರಿಮೆ

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ.
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ,
ಉನ್ನತ ಮಹಿಮ ಲಿಂಗದೇವಾ, ಶಿವಧೋ! ಶಿವಧೋ!! - ಬ.ವ.ದೀ.345

ಶೂದ್ರರು, ಅಸ್ಪೃಶ್ಯರು ಧರ್ಮವಿರಹಿತರಾಗಿ ಬಾಳುವುದನ್ನು ಕಂಡು ಮರುಕಪಟ್ಟು ಮಾತೃಹೃದಯಿ ಬಸವಣ್ಣನವರು ಅವರ ಬಳಿಗೆ ಧರ್ಮಪ್ರಚಾರ ಮಾಡುತ್ತ ಹೋದರೆ ಆಗ ದಲಿತರ ಕೇರಿಗಳಲ್ಲಿದ್ದ ಜನರು ಮೇಲ್ಜಾತಿಯವರ ಮೇಲೆ ತಮ್ಮ ನೆರಳೂ ಬೀಳಬಾರದೆಂದು ಓಡಿ ಹೋಗಿ ಗುಡಿಸಲುಗಳ ಒಳಗೆ ಸೇರಿಕೊಳ್ಳುತ್ತಿದ್ದರು. ಮನೆ ಮುಂದೆ ನಿಂತು ಕರೆದರೆ ಸಂದೇಹ ಪಡುತ್ತಿದ್ದರು. ಇದರಿಂದ ಖಿನ್ನರಾದ ಗುರು ಬಸವಣ್ಣನವರು ಉತ್ತಮ ಕುಲದಲ್ಲಿ ಹುಟ್ಟಿದೆ ಎಂಬುದೇ ನನಗೊಂದು ಕಷ್ಟತನದ ಹೊರೆಯಾಗಿದೆ. ಇದನ್ನು ಒಲ್ಲೆ. ಯಾರಾದರೂ ಇವರು ಉತ್ತಮ ಕುಲದವರು ಎಂದು ಗುರುತಿಸಿದ ತಕ್ಷಣ ನನಗೆ ಗಾಬರಿಯಾಗುತ್ತದೆ. ಏಕೆಂದರೆ, ಡೋಹರ ಕಕ್ಕಯ್ಯ ತನ್ನ ಮನೆಯಲ್ಲಿ ಸಿದ್ಧಪಡಿಸಿದ ಪ್ರಸಾದವನ್ನು ಕೊಡುವುದಿಲ್ಲ, ಜೇಡರ ದಾಸಯ್ಯ ಮಜ್ಜಿಗೆಯನ್ನು ಕುಡಿಯಲು ನೀಡುವುದಿಲ್ಲ. ಗೌರವಾನಿತ್ವನಾದ ಮಾದಾರ ಚನ್ನಯ್ಯ ನನ್ನನ್ನು ಹತ್ತಿರ ಹಾಯ ಗೊಡುವುದಿಲ್ಲ. ಇಂತಹ ಶರಣರ ಸಂಗದಿಂದ ನಾನು ವಂಚಿತನಾಗುತ್ತೇನೆ ಲಿಂಗದೇವಾ.

ಸಮಾಜ ಸುಧಾರಕರು, ಸತ್ಯವಾದಿಗಳ ಜೀವನದಲ್ಲಿ ವಿಲಕ್ಷಣ ಪ್ರಸಂಗ ಎದುರಾಗುತ್ತವೆ. 12ನೆಯ ಶತಮಾನದಲ್ಲಿ ವರ್ಣಾಶ್ರಮ ಧರ್ಮ ವ್ಯವಸ್ಥೆ ಸಾಮಾಜಿಕವಾಗಿ ಇತ್ತು. ಬ್ರಾಹ್ಮಣ, ಕ್ಷತ್ರಿಯರಿಗೆ ಉನ್ನತ ಸ್ಥಾನ, ವೈಶ್ಯರಿಗೆ ಅದಕ್ಕಿಂತ ಕೆಳಗೆ, ಶೂದ್ರರಿಗೆ ಇನ್ನೂ ಕೆಳಗೆ, ಅಸ್ಪೃಶ್ಯರ ಪರಿಸ್ಥಿತಿಯ ಬಗ್ಗೆ ಹೇಳುವುದೇ ಬೇಡ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣನವರು ಶ್ರೇಣೀಕೃತ (ladder type of society) ವ್ಯವಸ್ಥೆಯನ್ನು ವಿರೋಧಿಸಿ ಸಮಪಾತಳಿಯ (horizontal type of society) ಸಮಾಜ ವ್ಯವಸ್ಥೆಯನ್ನು ಪ್ರತಿಪಾದಿಸಿದಾಗ ಸವರ್ಣೀಯರ ಕೆಂಗಣ್ಣಿಗೆ ಗುರಿಯಾದರು. ಶೂದ್ರ, ದಲಿತ ವರ್ಗದವರು ಮೊದಲು ಬಂದು ಬೆನ್ನೆಲುಬಾಗಿ ನಿಂತರು. ಆಗ ಧರ್ಮ ಸ್ವೀಕಾರ ಮಾಡಿದವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶರು ಕಡಿಮೆ, ಬೆರಳ ಮೇಲೆ ಎಣಿಸುವಷ್ಟು. 770 ಶರಣರ (ಸಹಸ್ರ ಗಣಾಧೀಶರ) ಪಟ್ಟಿಯನ್ನು ನೋಡಿದಾಗ ಇದು ಮನದಟ್ಟಾಗುತ್ತದೆ. ಶೂದ್ರರು, ದಲಿತರೇ ಬಸವ ಧರ್ಮದ ಬೆನ್ನೆಲುಬಾದರು ಮತ್ತು ಅದಕ್ಕೆ ಸಂಕಷ್ಟ ಎರಗಿದಾಗ ರಕ್ಷಣೆಗೆ ಬೆಂಗಾವಲಾಗಿ ನಿಂತರು. ನಂತರ ಲಿಂಗಾಯತ ಧರ್ಮವು ವ್ಯಾಪಕವಾಗಿ ಪಸರಿಸಿತು. ಸಮಾಜವು ವಿಸ್ತಾರಗೊಳ್ಳ ತೊಡಗಿದಾಗ ವೈದಿಕ -ಹಿಂದು ಧರ್ಮದ ಮೇಲ್ಜಾತಿಯ ಸವರ್ಣೀಯರು ಹೆಚ್ಚಿನ ಪ್ರಮಾಣದಲ್ಲಿ ಧರ್ಮಾಂತರಗೊಂಡರು.

ಪುನಃ ಇಲ್ಲಿಯೂ ಒಳಪಂಗಡ, ಉಪಜಾತಿಗಳ ಬಿರುಕು ಮೂಡಿಸತೊಡಗಿದರು. ಈ ಜಾತಿಯ ವಿಷ ಕಳ್ಳಿ ಬೆಳೆಸಲೋಸುಗ ಧರ್ಮಗುರು ಬಸವಣ್ಣನವರ ಸ್ಥಾನವನ್ನು ಮರೆಮಾಚಲು ಶುರು ಮಾಡಿದರು.

348. ಮೇಲ್ಜಾತಿಯ ನಿರಾಕರಣೆ

ಸೆಟ್ಟಿ ಎಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚನ್ನಯ್ಯನ?
ಆನು ಹಾರುವನೆಂದಡೆ ಲಿಂಗದೇವಯ್ಯ ನಗುವನಯ್ಯಾ. - ಬ.ವ.ದೀ.345

ತಮಿಳುನಾಡಿನ ಸಿರಿಯಾಳ ಸೆಟ್ಟಿ ವೈಶ್ಯ ಕುಲದಲ್ಲಿ ಜನಿಸಿದವನು. ಜಾತಿ ವ್ಯವಸ್ಥೆಯೇ ಪ್ರಧಾನವಾಗಿರುವ ಭಾರತದಲ್ಲಿ ಜಾತಿಯ ಹೆಸರಿನಿಂದ ಹೀಯಾಳಿಸುವ ಕೆಟ್ಟ ಅಭ್ಯಾಸ ಸಾಗಿಬಂದಿದೆ. ಸಿರಿಯಾಳನು ಎಂಥಾ ಮಹಿಮನಾದರೇನು ಸೆಟ್ಟಿ ತಾನೆ? ಮಾಚಯ್ಯನು ಎಂತಹ ಘನ ಶರಣ (ಬಸವಣ್ಣನವರ ದೃಷ್ಟಿಯಲ್ಲಿ) ಆದರೇನು ಮಡಿವಾಳ ತಾನೆ? ಮನೆ ಮನೆಯ ಬಟ್ಟೆ ತೊಳೆಯುವ ಕಸುಬಿನವನು. ಕಕ್ಕಯ್ಯನು ಎಂತಹ ಮಹಾತ್ಮನಾದರೇನು ಚರ್ಮ ಹದ ಮಾಡುವ ಕಾಯಕದ ಜಾತಿಯಲ್ಲಿ ಹುಟ್ಟಿದವನು? ಚನ್ನಯ್ಯ ಎಂತಹ ಮಹಾಂತನಾದರೇನು ಸತ್ತ ಪ್ರಾಣಿಯನ್ನು ಛೇದಿಸಿ, ಚರ್ಮ ಬೇರ್ಪಡಿಸುವ ಉದ್ಯೋಗದ ಜಾತಿಯಲ್ಲಿ ಹುಟ್ಟಿದವನು? ಈ ರೀತಿ ಸಾಂಪ್ರದಾಯಿಕರು ಆ ಮಹಾಂತರನ್ನೆಲ್ಲ ದೂಷಿಸುವರು. ಹಾಗೆ ಅವರನ್ನು ಜಾತಿವಿಡಿದು ದೂಷಿಸಿ ನನ್ನನ್ನು ಹಾರುವ ಕುಲದಲ್ಲಿ ಹುಟ್ಟಿದ ಕುಲ ಶ್ರೇಷ್ಠ ಎಂದು ಗೌರವಿಸಿದರೆ ಸೃಷ್ಟಿಕರ್ತ ಲಿಂಗದೇವಯ್ಯನು ನಗದೆ ಇರುವನೆ? ಎಂದು ಗುರು ಬಸವಣ್ಣನವರು ಹೇಳುವರು.

ಭಾರತ ದೇಶದಲ್ಲಿ ಹುಟ್ಟು ಮತ್ತು ಕಸುಬು - ಈ ಎರಡನ್ನೂ ಹಿಡಿದು ವಿಭಜಿಸುವ ಮತ್ತು ವರ್ಗೀಕರಿಸುವ ಅನಿಷ್ಟ ಪದ್ಧತಿ ಬೆಳೆದು ಬಂದಿದೆ. ಅವರು ಎಷ್ಟೇ ದೊಡ್ಡವರಾಗಿ ಬೆಳೆದರೂ ಗೌರವ ಕೊಡದೆ ಅವನೋ ಇಂಥ ಜಾತಿಯವನು ಎಂದು ಮೂದಲಿಸುವ ಪ್ರವೃತ್ತಿ ಇದೆ. ಇದನ್ನು ಗುರು ಬಸವಣ್ಣನವರು ಖಂಡಿಸಿ ಹುಟ್ಟಿಗೂ, ಉದ್ಯೋಗಕ್ಕೂ ವ್ಯಕ್ತಿಯ ಸಾಧನೆಗೂ ಸಂಬಂಧವಿಲ್ಲ. ಸಿರಿಯಾಳ ಶೆಟ್ಟಿಯ ಭಕ್ತಿ ಯಾರಿಗೆ ಸಾಧ್ಯ? ಮಾಚಿದೇವರು ಹೊರಗಿನ ಬಟ್ಟೆಯನ್ನು ನೀರಿನಲ್ಲಿ ತೊಯಿಸಿ ಸ್ವಚ್ಛ ಮಾಡುವ ಮಡಿವಾಳ ಮಾತ್ರವಲ್ಲ ಮನದ ಮೈಲಿಗೆಯನ್ನು ಜ್ಞಾನದ ನೀರಿನಿಂದ ತೊಳೆದು ವ್ಯಕ್ತಿತ್ವ ವಿಕಸನ ಮಾಡುವ ಗುರು. ಕಕ್ಕಯ್ಯ ಮಹಾಪ್ರಸಾದಿ, ಮಾದಾರ ಚನ್ನಯ್ಯ ಶಿವನಿಗೆ ಅಂಬಲಿ ಕುಡಿಸಿದವನು. ಇಂಥ ಮಹಾನ್ ಸಾಧಕರನ್ನು ಪೂರ್ವದ ಜಾತಿ ಹಿಡಿದು ನಿಂದಿಸುವುದು ಅಮಾನವೀಯ, ದೇವ ವಿರೋಧಿ ಕಾರ್ಯವಲ್ಲವೆ ?

349. ಮಾನವ ಹಕ್ಕುಗಳ ಪ್ರತಿಪಾದನೆ

ಚನ್ನಯ್ಯನ ಮನೆಯ ದಾಸನ ಮಗನು;
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವನ ಸಾಕ್ಷಿಯಾಗಿ. - 347

ಈ ವಚನವನ್ನು ಶಬ್ದಶಃ ಅರ್ಥಮಾಡಿದರೆ ಬಹಳಷ್ಟು ಪ್ರಮಾದವಾಗುತ್ತದೆ. ಇಂಥ ವಚನವನ್ನು ಹಿಡಿದೇ ಬಂಜಗೆರೆ ಜಯಪ್ರಕಾಶ ಎಂಬುವವರು ಬಸವಣ್ಣನವರು ಮಾದಾರ ಕುಲದಲ್ಲಿ ಹುಟ್ಟಿದವರು ಎಂದು ಬರೆಯುವ ಸಾಹಸ ಮಾಡಿದರು. ಸ್ವತಃ ಧರ್ಮಪಿತರ "ನಾನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ", "ಹಾರುವ ಹಾರುವನಪ್ಪೆ ಸದ್ಭಕ್ತರು ಎನ್ನವರೆಂದು" ಎಂದೆಲ್ಲ ಹೇಳಿರುವಾಗ ಧರ್ಮಗುರು ಬಸವಣ್ಣನವರು ಮಾದರ ಕುಲದಲ್ಲಿ ಹುಟ್ಟಿದರು ಎನ್ನುವುದು ಎಷ್ಟು ಹಾಸ್ಯಾಸ್ಪದ ! ಹಾಗಾದರೆ ಮೇಲ್ಕಂಡ ವಚನದ ಭಾವಾರ್ಥವೇನು?

ಸಾಮಾಜಿಕ ವ್ಯವಸ್ಥೆಯಲ್ಲಿ ಮಾದಾರ ಚನ್ನಯ್ಯ ಅತ್ಯಂತ ಕೆಳಗೆ; ಅಂಥ ಮನೆಯಲ್ಲಿರುವ ಓರ್ವ ದಾಸನ ಮಗ; ಡೋಹರರು ಅತ್ಯಂತ ಕೆಳಗಿನ ಜನ - ಅಂಥವನ ಮನೆಯ ದಾಸಿ, ಅವಳ ಮಗಳು ಬೆರಣಿಯ ಆಯಲು ಹೋಗಿ ಸಂಗವನ್ನು ಮಾಡಿದರು. ಇಂಥ ದಂಪತಿಗಳಿಗೆ ಹುಟ್ಟಿದ ಮಗ ನಾನು;

ಇದಕ್ಕೆ ದೇವರೇ ಸಾಕ್ಷಿ! ಎನ್ನುತ್ತಾರೆ. ಇದು ನಿಜವೇ ? ಈ ವಚನದ ಶಬ್ದಶಃ ಅರ್ಥವನ್ನು ಮಾಡಬಾರದು. ಇಲ್ಲಿ ಮಾನವ ಹಕ್ಕುಗಳ ಪ್ರತಿಪಾದನೆ ಇದೆ. ಸಮಾಜದಲ್ಲಿ ಮಾದರ ಚನ್ನಯ್ಯ ಅತ್ಯಂತ ಕೆಳಗಿನ ಶ್ರೇಣಿಯಲ್ಲಿರುವವನು. ಅವನ ಮನೆಯ ದಾಸನ ಮಗ, ಕಕ್ಕಯ್ಯನು ಸಹ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಶ್ರೇಣಿಯಲ್ಲಿರುವ ವ್ಯಕ್ತಿ; ಆತನ ಮನೆಯ ದಾಸಿಯ ಮಗಳು ಬೆರಣಿಯನಾಯಲು ಹೋಗಿ ಸಂಗ ಮಾಡಿದಾಗ ಒಂದು ಮಗು ಹುಟ್ಟಿತು. ಜಾತಿಗಳು ನಿಕೃಷ್ಟ, ಮಾಡಿದ್ದು ಅನೈತಿಕ ಸಂಗ. (ಇಲ್ಲಿ ವಿವಾಹವಾಗಿ ಮಗುವನ್ನು ಹೆತ್ತಿರುವದಿಲ್ಲ.) ಹೀಗೆ ಹುಟ್ಟಿದ ಮಗುವಿಗೆ ಸಮಾಜವು ಕೊಡುವ ಸ್ಥಾನಮಾನವೇನು?

ಮಾದರಸ -ಮಾದಲಾಂಬಿಕೆ ಎಂಬ ಶ್ರೇಷ್ಠ ಬ್ರಾಹ್ಮಣ ಜಾತಿಯ ದಂಪತಿಗಳಲ್ಲಿ ಅಧಿಕೃತ ವಾದ ವಿವಾಹದಿಂದ ಹುಟ್ಟಿದ ಮಗುವಾದ ನನಗೆ ಯಾವ ಸಾಮಾಜಿಕ ಸ್ಥಾನಮಾನ, ಸೌಲಭ್ಯ, ಗೌರವ ಸಿಗುವುದೋ ಅದೇ ಆ ರೀತಿ ಹುಟ್ಟಿದ ಮಗುವಿಗೂ ದೊರೆಯಬೇಕು. ಯಾವ ಮಾನವರೂ ಸೌಲಭ್ಯ ಮತ್ತು ಸಾಮಾಜಿಕ ನ್ಯಾಯದಿಂದ ವಂಚಿತರಾಗಬಾರದು.

350. ಧರ್ಮ ಸಂತಾನ

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ 'ಅಯ್ಯಾ ಅಯ್ಯಾ' ಎನಲಾರೆ
ಚನ್ನಯ್ಯನೆಮ್ಮಯ್ಯನು; ಚನ್ನಯ್ಯನ ಮಗ ನಾನು,
ಲಿಂಗದೇವನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವಣ್ಣನು — ಬ.ವ.ದೀ.348

ವೇಶ್ಯೆಗೆ ಮಕ್ಕಳು ಹುಟ್ಟಿದರೆ ಆಕೆಯ ಮಕ್ಕಳು ಯಾರನ್ನು ಅಪ್ಪಾ ಎಂದು ಕರೆಯಬೇಕು? ಹೀಗಾಗಿ ಅವಳ ಮನೆಗೆ ಬರುವ ವಿಟರನ್ನೆಲ್ಲ ಅಪ್ಪಾ, ಅಯ್ಯಾ ಎಂದು ಕರೆಯುತ್ತಾರೆ. ಆರೀತಿ ಯಾರನ್ನಾದರೂ ಅಂದರೆ ಅನೇಕ ಮಹಾತ್ಮರು, ಸಂತರು ಇರುತ್ತಾರೆ. ಅವರನ್ನೆಲ್ಲ ಅಯ್ಯಾ ಎನ್ನುವುದಿಲ್ಲ. ಶಿವನಿಗೆ ಅಂಬಲಿಯನ್ನು ಉಣ್ಣಿಸಿದ ಚನ್ನಯ್ಯನನ್ನು ಮಾತ್ರ ಅಯ್ಯಾ ಎನ್ನುತ್ತೇನೆ. ಲಿಂಗದೇವನ ಮಹಾಮನೆಯಾದ ಈ ಜಗತ್ತಿನಲ್ಲಿ ಅನೇಕ ಸಂತ, ಮಹಂತರು ಆಗಿ ಹೋಗಿರಬಹುದು. ನಾನು ಮಾತ್ರ ಚನ್ನಯ್ಯನೊಡನೆ ಗುರುತಿಸಿಕೊಳ್ಳುತ್ತೇನೆ. ರಾಜ್ಯದ ಭಂಡಾರಿ ಮತ್ತು ಭಕ್ತಿ ಭಂಡಾರಿ ಬಸವಣ್ಣನಾದ ನಾನು ಲಿಂಗದೇವನ ಮಹಾಮನೆಯಲ್ಲಿ ಧರ್ಮ ಸಂತಾನ! ಕೇವಲ ತಾಯಿತಂದೆಯರ ಗರ್ಭ ಸಂಜಾತನಾದ ನರ ಮಾನವನಲ್ಲ, ಅಧ್ಯಾತ್ಮಿಕ ಮರುಹುಟ್ಟು ಪಡೆದು ಭಕ್ತಿ ಮಾರ್ಗದಲ್ಲಿ ನಡೆಯುತ್ತಿರುವ ಧರ್ಮಸಂತಾನ ನಾನು.

351. ಹರನು ಮೂಲಿಗನಾದ ಪರಂಪರೆ

ಹರನು ಮೂಲಿಗನಾಗಿ, ಪುರಾತರೊಳಗಾಗಿ,
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯಾ.
ಕಳೆದ ಹೊಲೆಯನೆಮ್ಮಯ್ಯ ಜಾತಿಸೂತಕ
ಮಾದಾರನ ಮಗ ನಾನಯ್ಯಾ.
ಪನ್ನಗಭೂಷಣ ಕೂಡಲ ಸಂಗಯ್ಯಾ,
ಚನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ. — ಬ.ವ.ದೀ.349

ಇದು ಇತಿಹಾಸವನ್ನು ಚಿತ್ರಿಸುವ ಮಹತ್ವಪೂರ್ಣವಾದ ವಚನ. ವೇದಪೂರ್ವದ ಮಹಾತ್ಮನಾದ ಶಿವನು ಭಾರತೀಯ ಧಾರ್ಮಿಕ ಪರಂಪರೆಯ ಮೂಲ ಪುರುಷ. ಈ ದೇಶದಲ್ಲಿ ಶೈವ ಅರ್ಥಾತ್ ಆಗಮಿಕ, ವೈದಿಕ -ವೇದೋಕ್ತ ಎಂಬ ಎರಡು ಪರಂಪರೆಗಳು ಸಾಗಿ ಬಂದಿವೆ. ಲಿಂಗಾಯತ ಧರ್ಮದ ಮೂಲ ಪುರುಷರಾದ ಬಸವಣ್ಣನವರು ಶಿವನಿಂದ ಪ್ರಭಾವಿತರಾದವರು. ಶಿವನ ಕೊಡುಗೆಯಾದ ವಿಭೂತಿ, ರುದ್ರಾಕ್ಷಿ, ಮಂತ್ರ ಲಿಂಗಾಯತ ಧರ್ಮದ ಅಷ್ಟಾವರಣಗಳಲ್ಲಿ ಸೇರಿವೆ. ಒಂದು ಗಿಡದಲ್ಲಿ ಮೈದಳೆದ ಫಲ ಗಿಡದಿಂದ ಸ್ವತಂತ್ರವಾದ ನಂತರ ಮತ್ತೊಂದು ಗಿಡವನ್ನು ಹುಟ್ಟು ಹಾಕುವ ಸಾಮರ್ಥ್ಯವನ್ನು ಪಡೆದಿರುತ್ತದೆ, ಅದರಂತೆ ಶೈವದ ವೃಕ್ಷದಿಂದ ಉದುರಿದ ಲಿಂಗಾಯತ ಧರ್ಮವು

ಸ್ವತಂತ್ರ ಫಲವಾದ ಧರ್ಮವಾಗಿದೆ.

ಗುರು ಬಸವಣ್ಣನವರು ಆಚರಿಸುವ ಧರ್ಮ ಮಾರ್ಗವು ವೇದೋಕ್ತವಾದುದಾಗಿರದೆ ಶಿವೋಕ್ತವಾಗಿದೆ. ಹರನೆ ಮೂಲಿಗನಾದ ಪರಂಪರೆಯನ್ನು ಹೊಂದಿದೆ. ಮೂಲ ಪುರುಷ ಹರನಿಂದ ಪ್ರಾರಂಭವಾದ ಇದು ಶಿವಭಕ್ತರ ದೊಡ್ಡ ಪರಂಪರೆಯಿಂದ ಕೂಡಿದೆ. ಅವರಲ್ಲಿ ಶಿವನಿಗೆ ಅಂಬಲಿ ಉಣ್ಣಿಸಿದ ಮಾದಾರ ಚನ್ನಯ ಪ್ರಮುಖ. ಈತನ ಸಾಧನೆ ನೋಡಿ ಪ್ರಭಾವಿತನಾದ ನಾನು ಈತನನ್ನು ಎಷ್ಟು ಕೊಂಡಾಡಿದರೂ ನನ್ನ ಮನಸ್ಸು ದಣಿಯದು.

352. ದೂರವಿಟ್ಟುದೇಕೆ ದೇವಾ ?

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯಾ;
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ;
ಎನ್ನನೇತಕ್ಕರಿಯಿರಿ, ಲಿಂಗದೇವಾ ? — ಬ.ವ.ದೀ 350

ನಾನು ಕುಲಮದವನ್ನು ತೊರೆದಿದ್ದೇನೆ. ಮದವು ಹೊರಗಿನ ನಡೆನುಡಿಯಲ್ಲಿ ಅಭಿವ್ಯಕ್ತವಾಗುವ ಮಾಲಿನ್ಯವಾದರೆ ಕುಲ ಸೂತಕ ಅಂತರಂಗದಲ್ಲೇ ಸುಳಿದಾಡುವ ಮೇಲರಿಮೆ. ಶ್ರೇಷ್ಠನೆಂಬ ಮದ, ಶ್ರೇಷ್ಠ ಕುಲದಲ್ಲಿ ಹುಟ್ಟಿರುವೆನೆಂಬ ಸೂತಕ ಎರಡನ್ನೂ ಕಳೆದುಕೊಂಡು ನಾನು ದೀನ, ದಲಿತರ ಜೊತೆ ಗುರುತಿಸಿಕೊಂಡಿದ್ದೇನೆ. ಮಾದಾರ ಚನ್ನಯ್ಯನನ್ನು ಅಪ್ಪನೆಂದು, ಡೋಹಾರ ಕಕ್ಕಯ್ಯನನ್ನು ದೊಡ್ಡಪ್ಪ (ಬೊಪ್ಪ)ನೆಂದು ಭಾವಿಸುತ್ತೇನೆ. ಚಿಕ್ಕಯ್ಯನನ್ನು ನಮ್ಮ ಅಯ್ಯ (ತಾತ, ಗೌರವಾನ್ವಿತ ವ್ಯಕ್ತಿ) ಎಂದು ಗೌರವಿಸುತ್ತೇನೆ. ಕಿನ್ನರಿ ಬ್ರಹ್ಮಣ್ಣನನ್ನು ನಮ್ಮ ಅಣ್ಣನೆಂದು ಆದರಿಸುತ್ತೇನೆ. ಇಷ್ಟಾದರೂ ನನ್ನನ್ನು ಅರಿತು, ಅನುಗ್ರಹಿಸುತ್ತಲಿಲ್ಲವೇಕೆ ದೇವಾ ?

ಇಲ್ಲಿ ಇನ್ನೂ ಒಂದು ಸತ್ಯವನ್ನು ಅರಿಯಬಹುದು. ಮೇಲ್ಜಾತಿ (ಸವರ್ಣೀ)ಯವರು ಹೇರುತ್ತಿದ್ದ ವಿಧಿ-ನಿಷೇಧ, ಕಟ್ಟುನಿಟ್ಟುಗಳಿಂದ ನೊಂದು ನಲುಗಿ ಭಯಗ್ರಸ್ತರಾದ ಅಸ್ಪೃಶ್ಯರು, ನಿಮ್ನ ವರ್ಗದವರು ಸವರ್ಣೀಯರನ್ನು ಕಂಡರೆ ನಡುಗುತ್ತಿದ್ದರು. ಗುರುಬಸವಣ್ಣನವರು ಶೋಷಿತರಲ್ಲಿ ಆತ್ಮ ವಿಶ್ವಾಸ ಹುಟ್ಟಿಸಲು, ಸಾಮಾಜಿಕ ನ್ಯಾಯ ಕೊಡಿಸಲು ಬಂದರೂ ಸಂದೇಹ ಪಟ್ಟು, ದೂರಸರಿಯುತ್ತಿದ್ದರು. ಅದಕ್ಕಾಗಿ ನೋವಿನಿಂದ, "ನೀವು ನನ್ನನ್ನೇತಕ್ಕೆ ಅರಿಯಿರಿ?" ಎಂದು ನೊಂದು ನುಡಿದಿರಲೂಬಹುದು.

353. ವಿನಯ ಮೂರ್ತಿ ಗುರುಬಸವಣ್ಣನವರು !

ಭಕ್ತಿಯಿಲ್ಲದ ಬಡವ ನಾನಯ್ಯಾ
ಕಕ್ಕಯ್ಯನ ಮನೆಯಲು ಬೇಡಿದೆ
ಚನ್ನಯ್ಯನ ಮನೆಯಲು ಬೇಡಿದೆ
ದಾಸಯ್ಯನ ಮನೆಯಲು ಬೇಡಿದೆ
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಲಿಂಗದೇವಾ ? — ಬ.ವ.ದೀ 351

ಧರ್ಮಪಿತ ಗುರುಬಸವಣ್ಣನವರು ಭಕ್ತಿ ಭಂಡಾರಿ, ಭಕ್ತಿ ಪಥದ ನಿರ್ಮಾಪಕರು. ಆದರೆ ವಿನಯದಿಂದ ತಾವು ಇತರರಿಂದ ಭಕ್ತಿ ಭಿಕ್ಷೆಯನ್ನು ಬೇಡುವುದಾಗಿ ಹೇಳುತ್ತಾರೆ. ಡೋಹಾರ

ಕಕ್ಕಯ್ಯ, ಮಾದಾರ ಚನ್ನಯ್ಯ, ಜೇಡರ ದಾಸಯ್ಯ ಎಲ್ಲರಲ್ಲೂ ಬೇಡಿದಾಗ ಆ ಶರಣರು ಕೊಟ್ಟ ಭಕ್ತಿಯ ಭಿಕ್ಷೆಯಿಂದ ಗುರುಬಸವಣ್ಣನವರ ಪಾತ್ರೆ ತುಂಬಿತಂತೆ.

ಈ ವಚನ ಕೆಲವು ಐತಿಹಾಸಿಕ ಸಂಗತಿಗಳನ್ನು ದಾಖಲಿಸುತ್ತದೆ. ಕಕ್ಕಯ್ಯ, ಚನ್ನಯ್ಯ ಮತ್ತು ದಾಸಯ್ಯರು ಗುರುಬಸವಣ್ಣನವರ ಸಮಕಾಲೀನರು; ಅನುಭವ ಮಂಟಪದ ಶರಣರು. ಆದ್ದರಿಂದ ಗುರುಬಸವಣ್ಣನವರು ಅವರ ಒಡನಾಡಿ ಭಿಕ್ಷೆ ಬೇಡಲು ಸಾಧ್ಯವಾಯಿತು. ರಾಜೇಂದ್ರ ಚೋಳನಿಂದ ಸನ್ಮಾನಿತನಾದ ಚನ್ನಯ್ಯ ಬೇರೆ; ಕಲ್ಯಾಣದಲ್ಲಿದ್ದ ಮಾದಾರ ಚೆನ್ನಯ್ಯ ಬೇರೆ. ಅದೇ ರೀತಿ ರಾಜ ಜಯಸಿಂಹನ ಪತ್ನಿಗೆ ದೀಕ್ಷೆ ಕೊಟ್ಟ ದೇವರ ದಾಸಿಮಯ್ಯ ಬೇರೆ. ವಚನಕಾರನಾದ ಜೇಡರ ದಾಸಿಮಯ್ಯ ಬೇರೆ. ದೇವರ ದಾಸಿಮಯ್ಯ ನೇಯುತ್ತಿದ್ದುದು ದೇವಾಂಗ ಅಥವಾ ರೇಷ್ಮೆ ಬಟ್ಟೆ, ಜೇಡರ ದಾಸಿಮಯ್ಯ ನೇಯುತ್ತಿದ್ದುದು ಹತ್ತಿ ಬಟ್ಟೆ. ಈತ ಮತ್ತು ಈತನ ಪತ್ನಿ ದುಗ್ಗಲೆ ಅನುಭವ ಮಂಟಪದ ಶರಣರು.

ಇದಕ್ಕೆ ಪುಷ್ಟಿ ಕೊಡುತ್ತದೆ 347ನೆಯ ವಚನ. ಕಕ್ಕಯ್ಯನಿಂದ ಒಕ್ಕ ಪ್ರಸಾದವನ್ನು ದಾಸಯ್ಯನಿಂದ ಮಜ್ಜಿಗೆಯನ್ನು ಪಡೆಯಬೇಕಾದರೆ ಅವರು ಕಲ್ಯಾಣದಲ್ಲಿ ಇರಲೇ ಬೇಕಲ್ಲವೆ? ಚನ್ನಯ್ಯನಿಂದ ಮನ್ನಣೆ ಪಡೆಯಬೇಕಾದರೆ ಆತ ಕಲ್ಯಾಣದಲ್ಲಿ ವಾಸಿಸುತ್ತಿರಬೇಕಲ್ಲವೆ?

354. ಶರಣರು ಸಲಹುವರು

ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹರ ಕಕ್ಕಯ್ಯ,
ಅಯ್ಯಗಳಯ್ಯನು ನಮ್ಮ ಮಾದರ ಚನ್ನಯ್ಯ : ಲಿಂಗದೇವಾ,
ನಿಮ್ಮ ಶರಣರು ಎನ್ನ ಸಲುಹುವರಾಗಿ. – ಬ.ವ.ದೀ 353

ಹಿರಿಯಯ್ಯ ಅಂದರೆ ಅಪ್ಪನಿಗಿಂತ ದೊಡ್ಡವನಾದ ದೊಡ್ಡಪ್ಪನಿರಬಹುದು ಅಥವಾ ತಾತನು ಇರಬಹುದು. ತಮಿಳುನಾಡಿನ ಒಬ್ಬ ಶಿವಭಕ್ತ ಶ್ವಪಚಯ್ಯ, ಅಂತ್ಯಜನಾಗಿ ಹುಟ್ಟಿಯೂ ಕಠೋರ ಭಕ್ತಿಯಿಂದ ಶಿವನನ್ನೂ ಒಲಿಸಿಕೊಂಡವನು. ಅವನನ್ನು ತಾತನನ್ನಾಗಿ ಭಾವಿಸಿ ಡೋಹರ ಕಕ್ಕಯ್ಯನವರನ್ನು ಚಿಕ್ಕಪ್ಪನೆಂದು ಭಾವಿಸುತ್ತಾರೆ. ಎಲ್ಲರಿಗಿಂತ ಶ್ರೇಷ್ಠನು ಮಾದಾರ ಚೆನ್ನಯ್ಯ, ಇವರೆಲ್ಲರು ಅನುಗ್ರಹಿಸಿ ತಮ್ಮನ್ನು ಸಲಹುತ್ತಾರೆಂದು ಗುರುಬಸವಣ್ಣನವರು ಹೇಳುತ್ತಾರೆ.

355. ಭಕ್ತಿ ಪರಂಪರೆ

ಎಮ್ಮ ತಾಯಿ ನಿಂಬವ್ವೆ ; ನೀರನೆರೆದುಂಬಳು ;
ಎಮ್ಮಯ್ಯ ಚನ್ನಯ್ಯ ; ರಾಯಕಂಪಣವ ಹೊರುವ–
ಎಮಗಾರೂ ಇಲ್ಲವೆಂಬಿರಿ –
ಎಮ್ಮಕ್ಕ ಕಂಚಿಯಲಿ ಬಾಣಸವ ಮಾಡುವಳು ;
ಎಮಗಾರೂ ಇಲ್ಲವೆಂಬಿರಿ.
ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಲಿಂಗದೇವಾ. – ಬ.ವ.ದೀ 354

ಈಗಾಗಲೇ ನಾನು ಬರೆದಂತೆ ಭಾರತ ದೇಶದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅದನ್ನು ದಾಟಿ ಸಿಂಹಳದವರೆಗೆ ಶಿವಭಕ್ತಿಯ ಪರಂಪರೆಯೊಂದಿದೆ. ಗುರುಬಸವಣ್ಣನವರು ಹೊಸಧರ್ಮವನ್ನು ಕೊಟ್ಟರಾದರೂ ಪ್ರಭಾವಿತರಾದುದು ಶೈವ ಸಂಸ್ಕೃತಿಯಿಂದ. ಇನ್ನಿತರ

ಶರಣರಾದರೂ ಅಷ್ಟೆ. ಅವರ ವಚನ ಮುದ್ರಿಕೆಗಳೆಲ್ಲ ಶಿವ ಸಂಸ್ಕೃತಿಯವು. ಕೊಂಡೆಯ ಮಂಚಣ್ಣನವರ ಮಂಚಣ್ಣ ಪ್ರಿಯ ನಾರಾಯಣ ಎಂಬುದನ್ನು ಬಿಟ್ಟರೆ ಬಾಕಿ ಎಲ್ಲ ಶಿವ ಸಂಸ್ಕೃತಿಯವು. ಹೊಸ ಧರ್ಮವೊಂದನ್ನು ಬಸವಣ್ಣನವರು ಕೊಟ್ಟಾಗ ಇತರರು "ನಿಮಗೆ ಒಂದು ಪರಂಪರೆ ಇಲ್ಲ" ಎಂದು ವ್ಯಂಗ್ಯವಾಗಿ ವಿಡಂಬಿಸಿದಾಗ ಗುರುಬಸವಣ್ಣನವರು ಹೇಳುತ್ತಾರೆ. "ಏಕಿಲ್ಲ, ಹರನು ಮೂಲಿಗನಾಗಿ ಅಂದಿನಿಂದ ಇಂದಿನವರೆಗೂ ಸಾಗಿ ಬಂದ ಪರಂಪರೆ ಇದೆ. ನಮ್ಮ ತಾಯಿ ನಿಂಬಿಯಕ್ಕ ; ಮನೆಮನೆಗೆ ನೀರನ್ನು ಹೊತ್ತೊಯ್ದು ಕಾಯಕ ಮಾಡಿ ಶಿವಭಕ್ತಿ ಮಾರ್ಗದಲ್ಲಿದ್ದಾರೆ. ನಮ್ಮ ತಂದೆ ಚನ್ನಯ್ಯ, ಕಾಂಚೀಪುರದ ಅರಸನ ಲಾಯಕ್ಕೆ ಹುಲ್ಲನ್ನು ಒದಗಿಸಿ ಭಕ್ತಿ ಪಥದಲ್ಲಿದ್ದಾನೆ. ಎಮಗಾರೂ ಇಲ್ಲ ಅಂತೀರಿ, ನಮ್ಮಕ್ಕ ಬಿಜ್ಜ ಮಹಾದೇವಿ ಕಂಚೀಪುರದಲ್ಲಿ ಅಡಿಗೆ ಕಾಯಕ ಮಾಡಿ, ಭಕ್ತಿ ಮಾರ್ಗದಲ್ಲಿದ್ದಾಳೆ.

ಶಿವಭಕ್ತಿ ಪರಂಪರೆಯಲ್ಲಿ ಸಾಗಿ ಬಂದ ನನ್ನ ತಾತ, ಮುತ್ತಾತರು ಸಂಗ್ರಹಿಸಿದ್ದ ಭಕ್ತಿಯನ್ನು ಈಗ ನಾನು "ಇಷ್ಟಲಿಂಗದ ಮೂಲಕ (ನಿಮ್ಮ ಕೈಯಲು ಕೊಂಬೆ) ಪಡೆದು ಕೊಳ್ಳುತ್ತಿದ್ದೇನೆ".

ಐತಿಹಾಸಿಕವಾಗಿ ನೋಡಿದರೆ ಮೂಲ ಶೈವ ಧರ್ಮವು ಉತ್ತಮ ತತ್ತ ಸಿದ್ಧಾಂತಗಳಿಂದ ಕೂಡಿದ್ದಲ್ಲದೆ ಶಿವಭಕ್ತಿ ಪ್ರಧಾನವಾದ ಮಾರ್ಗವಾಗಿತ್ತು. ಪಾಶುಪತ ಶೈವದ ಜ್ಞಾನ, ನಾಥ ಪಂಥದ ಯೋಗ, ಭಾಕ್ತಿಕ ಪರಂಪರೆ ಮನೋಹರವಾಗಿದ್ದವು. ಬರು ಬರುತ್ತಾ ಅದು ವೈದಿಕ ವ್ಯವಸ್ಥೆಯ ಪ್ರಭಾವಕ್ಕೆ ಒಳಗಾಯಿತು. ತಮಿಳುನಾಡಿನ 63 ಪುರಾತನರ ವಿವರ ತಿಳಿದಾಗ ಅಲ್ಲಿ ಜಾತಿಪದ್ಧತಿಗೆ ಅವಕಾಶವಿರಲಿಲ್ಲ ಎಂಬುದು ತಿಳಿದು ಬರುತ್ತದೆ. ಈ ಪರಂಪರೆಯನ್ನು ತ್ಯಜಿಸಿ ಹೊಸದೊಂದನ್ನು ಗುರುಬಸವಣ್ಣನವರು ರೂಪಿಸಬೇಕಾದರೆ ಮುಖ್ಯ ಕಾರಣ ಶೈವ ಮಾರ್ಗವೂ ವೈದಿಕ ಪುರೋಹಿತ ಶಾಹಿಯ ಹಿಡಿತಕ್ಕೆ ಸಿಕ್ಕಿದುದು. ಆದರೆ, ಈ ಪ್ರಭಾವಕ್ಕೆ ಒಳಗಾಗುವ ಮೊದಲು ಇದ್ದರಲ್ಲ ನಿಂಬವ್ವೆ, ಚನ್ನಯ್ಯ ಮುಂತಾದವರು ಅವರನ್ನು ಮಾತ್ರ ನಿಷ್ಕಲಂಕ ಪ್ರೇಮದಿಂದ, "ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಧಿಯನ್ನು (ಇಷ್ಟ) ಲಿಂಗದ ಮೂಲಕ ಪಡೆದುಕೊಂಬೆ" ಎನ್ನುತ್ತಾರೆ ಗುರುಬಸವಣ್ಣನವರು.

356. ಶಿವಭಕ್ತರ ಪ್ರೀತಿಯ ಶಿಶು

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು :
ಬಾಣನವ ನಾನು, ಮಯೂರನವ ನಾನು.
ಕಾಳಿದಾಸನವ ನಾನು !
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ, ಚನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲಸಂಗಯ್ಯಾ – ಬ.ವ.ದೀ 354

ಆದಿ ಪ್ರಮಥ ಬಸವಣ್ಣನವರು ಒಂದು ನೂತನ ಪಥವನ್ನು ಸೃಷ್ಟಿಸಿದರು. ಆಗ ಸನಾತನವಾದಿಗಳು ತಮ್ಮ ಪರಂಪರೆ ಬಹಳ ಪುರಾತನವೆಂದು ಹೇಳಿಕೊಂಡಾಗ ತಾವೂ ಪುರಾತನವಾದ ಶಿವಭಕ್ತರ ಪರಂಪರೆಗೆ ಸಂಬಂಧಿಸಿದವರು; ಬಾಣ, ಮಯೂರ ಮತ್ತು ಕಾಳಿದಾಸನ ಪರಂಪರೆಯವರು ಎಂದು ಹೇಳಿಕೊಳ್ಳುತ್ತಾರೆ. ಶಿವಭಕ್ತಿ ಪರಂಪರೆ ಬಲು ಪುರಾತನ, ವೇದಪೂರ್ವದ್ದು. ವೇದಗಳು ರಚನೆಯಾಗುವ ಕಾಲಕ್ಕೆ ಆಗಲೇ ಶಿವನು ಆಗಿ ಹೋಗಿದ್ದು ಬಹಳ ಪ್ರಭಾವಶಾಲಿ ದೇವತೆಯಾಗಿ ಪೂಜಿಸಲ್ಪಡುತ್ತಿದ್ದ. ಬಾಣಾಸುರನು ಮಹಾಶಿವಭಕ್ತ. ಅವನ ಭಕ್ತಿಗೆ ಮೆಚ್ಚಿ ಶಿವನು ಬಾಣಾಸುರನ ಮನೆಯ ಬಾಗಿಲನ್ನು ಕಾಯುತ್ತಿದ್ದನಂತೆ. ಇನ್ನೊಬ್ಬನು ಬಾಣ ಎಂಬುವವನಿದ್ದಾನೆ. ಆತ ಆಸ್ಥಾನ ಕವಿ. ಇವನು ಮತ್ತು ಈತನ ಇನ್ನೊಬ್ಬ

ಮಿತ್ರ ಮಯೂರನ ಬಗ್ಗೆ ಈಗಾಗಲೇ ವಚನ 324 ರಲ್ಲಿ ವ್ಯಾಖ್ಯಾನಿಸಲಾಗಿದೆ.

ಕಾಳಿದಾಸ ಮಹಾನ್ ಶಿವಭಕ್ತ, ಉದ್ದಾಮ ಸಂಸ್ಕೃತ ಪಂಡಿತ, ಕುಮಾರ ಸಂಭವ ಕಾವ್ಯದ ಕರ್ತೃ. ಈ ಶಿವಭಕ್ತರು ನನ್ನ ಹಿಂದಿನವರಾದರೆ ಕಕ್ಕಯ್ಯ, ನನ್ನ ದೊಡ್ಡಪ್ಪ; ಚನ್ನಯ್ಯ ನನ್ನ ಚಿಕ್ಕಪ್ಪ; ಇವರೆಲ್ಲ ನನ್ನನ್ನು ಪ್ರೀತಿಯಿಂದ ಎತ್ತಿ ಆಡಿಸುತ್ತಾರೆ.

357. ದೇವನ ಒಡೆತನ ಭಕ್ತನ ತೊತ್ತುತನ

ಅಯ್ಯಾ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ ;
ಆತನ ತೊತ್ತಿನ ಮಗ ನಾನಯ್ಯಾ,
ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯಾ!
ಲಿಂಗದೇವಾ, ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ
ಎನ್ನ ತೊತ್ತುತನಕ್ಕೆ ಕೇಡಿಲ್ಲವಯ್ಯಾ — ಬ.ವ.ದೀ 355

ಶಿವ ಪರಂಪರೆ ಪ್ರಧಾನವಾಗಿ ಭಕ್ತಿ ಪರಂಪರೆ; ಶಿವನನ್ನು ತಂದೆ ಎಂದು ಉಮೆಯನ್ನು ತಾಯಿಯೆಂದು ನಂಬಿದ ಶಿವ ಸಂತಾನದಲ್ಲಿ ಭೇದ ಭಾವವಿರಲಿಲ್ಲ. ಅದರಲ್ಲಿ ರಕ್ತ ಸಂಬಂಧದ ವ್ಯಾಮೋಹಕ್ಕಿಂತಲೂ ಭಕ್ತಿ ಸಂಬಂಧವ ವ್ಯಾಮೋಹವೇ ಅಧಿಕವಾಗಿತ್ತು. ಇಂಥ ಭಾಕ್ತಿಕ ಪರಂಪರೆ (ವಂಶಾವಳಿ)ಯಲ್ಲಿ ಒಬ್ಬ ತೊತ್ತು ಅಂದರೆ ಸೇವಕರಲ್ಲೇ ಅತ್ಯಂತ ಕೆಳಗಿನ ಕೆಲಸ ಮಾಡುವಂತಹವನಿಗೆ ಒಬ್ಬ ಮಗ ಹುಟ್ಟಿದ. ಅವನ ಬಳಿ ಕೆಲಸ ಮಾಡುವ ಇನ್ನೊಬ್ಬ ತೊತ್ತಿನ ಮಗ ನಾನು. ಶಿವಭಕ್ತರ ಸನಿಹದಲ್ಲಿ ಇದ್ದು ಸೇವೆ ಮಾಡುವ ಬಳಿದೊತ್ತು, ಅವರ ಬಳಗದಲ್ಲಿ ಒಬ್ಬ, ಅವರ ವಂಶದಲ್ಲಿ ಒಬ್ಬ ನಾನು; ನಿನ್ನ ಒಡೆತನಕ್ಕೆ ಕೇಡಿಲ್ಲ, ಏಕೆಂದರೆ ನೀನು ಜಾತಿ, ಉದ್ಯೋಗ, ಅಂತಸ್ತು ಹಿಡಿದು ಭಕ್ತರಲ್ಲಿ ಭೇದ ಮಾಡದೆ ಎಲ್ಲರನ್ನೂ ಸಮಾನವಾಗಿ ಪ್ರೀತಿಸುವುದರಿಂದಾಗಿ ನಾನು ಕೀಳರಲ್ಲಿ ಕೀಳಾಗಿ ಇರಲಿಕ್ಕೆ ಎಷ್ಟೂ ಸಂಕೋಚ ಪಡುವುದಿಲ್ಲ. ತೊತ್ತಾಗಿರಲು ಹೆಮ್ಮೆ ಪಡುತ್ತೇನೆ.

358. ತೊತ್ತಿನ ಮಗ

ಕಯ್ಯ ಬೋಹರಿಗೆ ಮಂಡೆಯ ಮೇಲೆ ಸಿಂಬಿ
ಸಿಂಬಕನ ಮನೆಯ ಮಗ ನಾನಯ್ಯ
ಲಿಂಗದೇವಯ್ಯಾ,
ಮಂಚದ ಕೋಡೇರಿ ಬಂದ ತೊತ್ತಿನ ಮಗ ನಾನಯ್ಯ

ಮನೆಯ ದನದ ಕೊಟ್ಟಿಗೆ, ಅಂಗಳ ಇತ್ಯಾದಿ ಗುಡಿಸುವ ಆಳು ಕೈಯಲ್ಲಿ ಕಸಬರಿಗೆ ಹಿಡಿದಿರುತ್ತಾನೆ, ತಲೆಗೆ ಒಂದು ಸಿಂಬೆಯನ್ನು ಕಟ್ಟಿರುತ್ತಾನೆ. ಗುಡಿಸಿದ ಕಸ, ಬಳಿದ ಸಗಣಿ ಎಲ್ಲವನ್ನು ಬುಟ್ಟಿಗೆ ಹಾಕಿಕೊಂಡು ತಲೆಯ ಮೇಲಿನ ಸಿಂಬೆಯ ಮೇಲೆ ಇಟ್ಟುಕೊಂಡು ತಿಪ್ಪೆಗೆ ಎಸೆಯುತ್ತಾನೆ. ಅಂತಹ ಸೇವಕ (ಸಿಂಬಕ)ನ ಮನೆಯ ಮಗ ನಾನು ಎಂದು ಗುರುಬಸವಣ್ಣನವರು ಗುರುತಿಸಿಕೊಳ್ಳುತ್ತಾರೆ. ಸೇವಕರಲ್ಲೂ ವಿವಿಧ ಮಟ್ಟಗಳಿರುತ್ತವೆ. ಅಡಿಗೆ ಮಾಡುವವ ಬೇರೆ; ಮನೆಯೊಳಗಣ ಕಸ ಗುಡಿಸುವವನೇ ಬೇರೆ, ಹೊರಗಿನ ಕಸ ಗುಡಿಸುವವ ತೀರಾ ನಿಕೃಷ್ಟ ಎಂದು ಭಾವಿಸುತ್ತಿದ್ದರು. ಅಂಥವನೊಡನೆ ಗುರುಬಸವಣ್ಣನವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಮಂಚದ ಕೋಡೇರಿ ಬಂದ ತೊತ್ತಿನ ಮಗ ನಾನು ಎನ್ನುತ್ತಾರೆ. ದಲಿತರನ್ನು ವಿಲಕ್ಷಣವಾದ ಅಮಾನವೀಯ ಆಟಗಳಿಗೆ ಬಳಸಿಕೊಳ್ಳುವ ಕಾಲವದಾಗಿತ್ತು. (ಈಗಲೂ ಕೆಲವು ಹಳ್ಳಿಗಳಲ್ಲಿ ಅಂಥ ಕ್ರೂರ ಸಂಪ್ರದಾಯಗಳಿವೆ) ಸಿಡಿ, ಮಂಚ ಎನ್ನುವ ಎತ್ತರವಾದ ಒಂದು ಕೋಲಿನ

ತುದಿಗೆ ಕಟ್ಟಿ ಗರಗರ ತಿರುಗಿಸುವ ಆಟವಿತ್ತು. ಇವತ್ತು ಸಹ ಮೂಢ ಭಕ್ತರು ಬೆನ್ನಿನ ಮೂಳೆಗೆ ಕೊಕ್ಕೆ ಹಾಕಿಸಿಕೊಂಡು ಸಿಡಿ ಆಡುವ ಹರಕೆ ಹೊರುತ್ತಾರೆ. ಅಂಥ ತೊತ್ತಿನ ಮಗ ನಾನು ಎಂದು ಗುರುಬಸವಣ್ಣನವರು ಹೇಳಿಕೊಳ್ಳುತ್ತಾರೆ.

359. ಭಕ್ತರ ಮನೆಯೇ ಇರಲಿ

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ;
"ತಾರೌ ಅಗ್ಘವಣೆಯ, ನೀಡೌ ಪತ್ರೆಯ,
ಲಿಂಗಕ್ಕೆ ಬೋನವ ಹಿಡಿಯೌ" ಎಂಬರು;
"ಲಿಂಗದೇವನ ಮಹಾಮನೆಯಲ್ಲಿ
ಒಕ್ಕುದನುಣ್ಣೌ ತೊತ್ತೆ" ಎಂಬರು ? — ಬ.ವ.ದೀ 351

ಭಕ್ತಿಯ ವಾತಾವರಣವಿಲ್ಲದ ವಿಲಾಸದ ವಾತಾವರಣ ತುಂಬಿರುವ ಅರಸರು ಮತ್ತು ಸಿರಿವಂತರ ಮನೆಯಲ್ಲಿ ಒಡತಿಯಾಗಿರುವುದಕ್ಕಿಂತಲೂ ಭಕ್ತರ ಮನೆಯಲ್ಲಿ ಸೇವಕಿಯಾಗಿರುವುದು ಬಹು ಚಂದವಂತೆ. ಏಕೆಂದರೆ ಅರಸರು, ಸಿರಿವಂತರ ಮನೆಯಲ್ಲಿ ಬರೀ ಬಟ್ಟೆ ಉಡುವುದು, ಆಭರಣ ತೊಡುವುದು, ದೈಹಿಕ ಅಲಂಕಾರ ಮಾಡಿಕೊಳ್ಳುವುದು ಮುಂತಾದ ಲೌಕಿಕ ವಾತಾವರಣ ತುಂಬಿರುತ್ತದೆ. ಅದೇ ಶರಣರ ಮನೆಯಲ್ಲಿ 'ವಿಭೂತಿ ಕೊಡವ್ವ, ಪೂಜೆಗೆ ನೀರನ್ನು ತೆಗೆದುಕೊಂಡು ಬಾ, ಪುಷ್ಪ–ಪತ್ರೆಯನ್ನು ತಾ' ಎಂದು ಕೇಳುವ ಭಾಕ್ತಿಕ ವಾತಾವರಣವಿರುತ್ತದೆ. ಪೂಜೆ ಆಗುತ್ತಿದ್ದಂತೆಯೇ "ನಮ್ಮ ಲಿಂಗಯ್ಯನಿಗೆ ಪ್ರಸಾದ ತಾ" ಎನ್ನುವರು. ಶರಣರ ಮಹಾಮನೆ ಪ್ರೀತಿಯ ಆಗರ; ಲಿಂಗಕ್ಕೆ ಅರ್ಪಿತವ ಮಾಡಿದ ಪ್ರಸಾದವನ್ನು ಪ್ರೀತಿಯಿಂದ ನೀಡುವರು. ಇಲ್ಲಿ "ತೊತ್ತೇ" ಎಂಬ ಸಂಬೋಧನೆ ತಿರಸ್ಕಾರದ ಧ್ವನಿಯಿಂದ ಕೂಡಿದುದಾಗಿರದೆ ಅತೀವ ಆದರದಿಂದ ಕೂಡಿದ್ದಾಗಿರುತ್ತದೆ.

360. ಗಂಡುದೊತ್ತಾಗುವುದು

ಆನು ನಿಮ್ಮ ಶರಣರಿಗೆ,
ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ
ಲಿಂಗದೇವಾ, ನಿಮ್ಮ ಶರಣರಿಗೆ — ಬ.ವ.ದೀ 357

ಹಿಂದಿನ ಕಾಲದಲ್ಲಿ ಗಂಡುದೊತ್ತಾಗುವುದು, ಗರುಡನಾಗುವುದು ಮುಂತಾಗಿ ಆಚರಣೆಯಲ್ಲಿತ್ತು. ರಾಜರಿಗೆ ಗರುಡನಾದವನು ತನ್ನ ಪ್ರಾಣವನ್ನೇ ಅರ್ಪಿಸಲು ಸಿದ್ಧನಿರುತ್ತಿದ್ದ. ಅದೇ ರೀತಿ ಮಾಲಿಕರಿಗೆ ಕೆಲವರು ತೊತ್ತಾಗುತ್ತಿದ್ದರು. ಅವರು ತಲೆ ಬೋಳಿಸಿಕೊಳ್ಳುತ್ತಿದ್ದರು. ಇಲ್ಲಿ ಆ ಹೋಲಿಕೆ ಕೊಟ್ಟು, ಲಿಂಗದೇವನ ಪ್ರತಿನಿಧಿಯಾದ ಶರಣರಿಗೆ ನಾನು ಸೇವಕನಾಗುತ್ತೇನೆ ಎಂದು ಗುರುಬಸವಣ್ಣನವರು ಹೇಳುತ್ತಾರೆ.

361. ಧರ್ಮದ ಕವಿಲೆ

ಅನು ದಿನ ಮನ ಮುಟ್ಟ ಧನ್ಯನಯ್ಯಾ ದಮ್ಮಯ್ಯಾ ! ದಮ್ಮಯ್ಯಾ !
ನಿಮ್ಮ ಧರ್ಮದ ಕವಿಲೆಯಾನಯ್ಯಾ ಲಿಂಗದೇವಾ,
ನಿನ್ನ ಶರಣರ ಮನೆಯ ಮಗ ನಾನಯ್ಯಾ — ಬ.ವ.ದೀ 358

ಪ್ರತಿ ದಿವಸವೂ ಮನ ಮುಟ್ಟಿ ಪೂಜಿಸುವ ನಾನು ನಿಜಕ್ಕೂ ಧನ್ಯ. ದಮ್ಮಯ್ಯ ಎಂಬುದು ಕಿಂಕರಭಾವದ ನುಡಿ, ದಯವಿಟ್ಟು ಎಂಬ ಅರ್ಥವನ್ನು ಇದು ಕೊಡುತ್ತದೆ. ನಾನು ನಿಮ್ಮ ಧರ್ಮದ ಹಸು. ಇದನ್ನು ಎಲ್ಲರೂ ಕೂಡಿ ಸಾಕಬೇಕು, ದಯವಿಟ್ಟು ಪೋಷಿಸಿರಿ. ಶರಣರೇ, ನಿಮ್ಮ ಮನೆಯ ಮಗನೆಂದು ನನ್ನ ಸಲಹಿರಿ ಎಂದು ಗುರುಬಸವಣ್ಣನವರು ಬೇಡುತ್ತಾರೆ.

ಹರಕೆ ಮಾಡಿಕೊಂಡು ಕೆಲವರು ಹಸುಗಳನ್ನೂ, ಹೋರಿಗಳನ್ನೂ ದೇವಾಲಯಗಳಿಗೆ ಸಮರ್ಪಿಸುತ್ತಾರೆ. ಇವು ಸ್ವಚ್ಛಂದವಾಗಿ ತಿರುಗಾಡುತ್ತವೆ. ದೇವರ ಹಸು/ಹೋರಿ ಎಂದು ಜನರು ದಂಡಿಸುವುದಿಲ್ಲ. ತಮ್ಮ ಹೊಲದಲ್ಲಿ ಮೇಯ್ದರೂ ತಮಗೆ ಹುಲುಸಾದ ಬೆಳೆ ಬರುತ್ತದೆ ಎಂದು ನಂಬುತ್ತಾರೆ. ಎಲ್ಲರೂ ಮೇವು ಹಾಕುತ್ತಾರೆ, ನೀರು, ಮಜ್ಜಿಗೆ ಮುಂತಾಗಿ ಕುಡಿಸುತ್ತಾರೆ. ಅದೇ ರೀತಿ ನನ್ನನ್ನು ಧರ್ಮದ ಕವಿಲೆ ಎಂದು ತಿಳಿದು ಶರಣರೇ ನನ್ನನ್ನು ಪೋಷಿಸಿರಿ ಎನ್ನುತ್ತಾರೆ ಗುರುಬಸವಣ್ಣನವರು.

362. ಶರಣರ ಮನೆಯ ಶ್ವಾನನಾಗಿರಿಸು

ಕಾಮವ ತೊರೆದಾತ, ಹೇಮವ ಜರಿದಾತ,
ಭಾನುವಿನ ಉದಯಕ್ಕೆ ಒಳಗಾಗ (ದಾತ) ಶರಣನು !
ಆವಾಗಲೂ ನಿಮ್ಮನೆ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು.
ಮಹಾದಾನಿ ಲಿಂಗದೇವಾ. – ಬ.ವ.ದೀ 359

ಒಬ್ಬ ವ್ಯಕ್ತಿ ದೇವರಿಗಾಗಿ, ರಾಷ್ಟ್ರಕ್ಕಾಗಿ, ಸಮಾಜ ಸೇವೆಗಾಗಿ, ವಿಶಿಷ್ಟ ಧ್ಯೇಯಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಂಡಾಗ ಅವನಿಗೆ ಕಾಮದ ಕಡೆಗೆ ಲಕ್ಷ್ಯವೇ ಇರುವುದಿಲ್ಲ. ಸಂಪೂರ್ಣ ಲಕ್ಷ್ಯ ತಾನಿಟ್ಟುಕೊಂಡ ಧ್ಯೇಯದ ಕಡೆಗೆ! ಹೀಗೆ, ಕಾಮವ ತೊರೆದಾತನಾಗಿರುತ್ತಾನೆ. ಇನ್ನು ಕೆಲವರು ಹಣದ ಮೋಹಿಗಳಾಗಿರುವುದಿಲ್ಲ. ಅವರು ಏನನ್ನೂ ಸಂಗ್ರಹಿಸದ ನಿರಾಭಾರಿಗಳಾಗಿರುತ್ತಾರೆ. ಮತ್ತೆ ಕೆಲವರು ಸಮಾಜದ ಉನ್ನತಿಗಾಗಿ ಹಣವನ್ನು ಇರಿಸಿಕೊಂಡರೂ ಅದಕ್ಕೆ ಮನವನ್ನೊಡ್ಡದ ನಿರಾಭಾರಿಗಳಾಗುತ್ತಾರೆ, ನಿರ್ಲಿಪ್ತವಾಗಿ ಅದನ್ನು ಬಳಸುತ್ತಾರೆ.

"ಭಾನುವಿನ ಉದಯಕ್ಕೆ ಒಳಗಾಗದಾತ" ಎಂದರೆ ಸೂರ್ಯನ ಕಿರಣಗಳು ಬೀಳುವ ಮೊದಲೇ ಹಾಸಿಗೆಯಿಂದೆದ್ದು, ಇಷ್ಟಲಿಂಗಾರ್ಚನೆ ಪೂರೈಸಿಕೊಂಡವನು. ಹೊರಗಡೆ ಯಾವುದೇ ಕೆಲಸಕ್ಕೆ ಕೈ ಹಾಕುವ ಮೊದಲಿಗೇ ಸುಪ್ರಭಾತದಲ್ಲಿ ಪೂಜೆಯನ್ನು ಪೂರೈಸಿ, ಕರುಣೋದಕ ಕರುಣ ಪ್ರಸಾದಗಳನ್ನು ಪಡೆದುಕೊಂಡವನು. ಹಗಲು-ಇರುಳು, ಜಾಗ್ರತ್-ಸ್ವಪ್ನ-ಸುಷುಪ್ತಿ ಎಲ್ಲ ಅವಸ್ಥೆಗಳಲ್ಲೂ ಸೃಷ್ಟಿಕರ್ತನಾದ ಲಿಂಗದೇವನನ್ನು ನೆನೆಯುವವನ ಮನೆಯನ್ನು ಕಾಯುವ ಶ್ವಾನ ಸಹ ಪುಣ್ಯ ಮಾಡಿರಬೇಕಂತೆ. ಏಕೆಂದರೆ ಅದರ ಕಣ್ಣಿಗೆ ಬೀಳುವ ದೃಶ್ಯಗಳೆಲ್ಲವೂ ಮಂಗಳಮಯ, ದೈವೀಮಯ. ಪಾಪಾತ್ಮರ ಮನೆಯ ಚಟುವಟಿಕೆಗಳನ್ನು ಬಾಯಿಲ್ಲದಿದ್ದರೂ ಕಣ್ಣಿಂದ ಕಂಡು ನಾಯಿಯು ಪಾಪವನ್ನು ಮಾಡುವ ಅವಕಾಶ ಜಾಸ್ತಿ ಇದ್ದರೆ ಜ್ಞಾನ-ಪವಿತ್ರ ನಾದವನ್ನು ಕೇಳಿ ಉತ್ತಮ ಜನ್ಮಕ್ಕೆ ಹೋಗುವ ಸಂಭವವಿರುವುದರಿಂದ ಮಹಾದಾನಿ ಲಿಂಗದೇವನನ್ನು ತಮ್ಮನ್ನು ಶರಣರ ಮನೆಯ ಶ್ವಾನನನ್ನಾಗಿರಿಸು ಎಂದು ಬೇಡುತ್ತಾರೆ.

363. ಮೇಲರಿಮೆಯಿಂದ ನರಕ

ಮೇಲಾಗಲೊಲ್ಲೆನು ಕೀಳಾಗಲಲ್ಲದೆ,

ಕೀಳಿಂಗಲ್ಲದೆ ಹಯನು ಕರೆವುದೆ ?
ಮೇಲಾಗಿ ನರಕದೊಳೋಲಾಡಲಾರೆನು;
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ ಲಿಂಗದೇವಾ. – ಬ.ವ.ದೀ 360

ನಾನು ಇತರರಿಗಿಂತ ಶ್ರೇಷ್ಠ ಎಂಬ ಮೇಲರಿಮೆ ಮನಸ್ಸಿನ ಒಂದು ಮಾಲಿನ್ಯ ಗುರುಬಸವಣ್ಣನವರು ತಮ್ಮನ್ನು ತಾವು ತಗ್ಗಿಸಿಕೊಂಡು, ಇನ್ನಿತರರನ್ನು ಮೇಲೇರಿಸಿ ಮಾತನಾಡುವರು. ಅದಕ್ಕಾಗಿ ಹೇಳುತ್ತಾರೆ, "ನಾನು ಕೆಳಗಿನವನಾಗಿ ಇರುತ್ತೇನೆಯೇ ವಿನಾ ಅಹಂಕಾರದಿಂದ ಬೀಗುವುದಿಲ್ಲ. ಏಕೆಂದರೆ, ಕೆಳಗಿನ ಸ್ಥಾನವನ್ನು ಆರಿಸಿಕೊಳ್ಳುವುದರಿಂದ ಹೆಚ್ಚಿನ ಲಾಭವಿದೆ. ಹಸುವನ್ನು (ಎಮ್ಮೆಯನ್ನು) ಹಿಂಡುವಾಗ ಅದರ ಬೆನ್ನ ಮೇಲೆ ಕುಳಿತರೆ ಹಾಲು ಹಿಂಡದು ಕಾಲಬಳಿ ಕುಳಿತರೆ ಮಾತ್ರ ಹಾಲು ಹಿಂಡುವುದು. ಹಾಗೆಯೇ ಜ್ಞಾನಿಗಳಾದ ಗುರುಗಳು, ಶರಣರು ಜ್ಞಾನ ಧೇನುಗಳಿದ್ದಂತೆ. ಮುಮುಕ್ಷುವಿನಲ್ಲಿ ಶರಣಾಗತಿ, ಕಿಂಕರತೆ ಇದ್ದರೆ ಮಾತ್ರ ತಮ್ಮ ಜ್ಞಾನವನ್ನು, ಅನುಗ್ರಹವನ್ನು ನೀಡುವರು. ಹಾಗಲ್ಲದೆ ಮೇಲೆಂಬ ಅಹಂಭಾವದಿಂದ ವರ್ತಿಸುವ ವ್ಯಕ್ತಿ ಏಕಾಂಗಿಯಾಗುತ್ತಾನೆ, ಪರಿತ್ಯಕ್ತನಾಗಿ ಸ್ವಯಂ ಘೋಷಿತ ಬಂಧನದಲ್ಲಿ ಸಿಲುಕುತ್ತಾನೆ. ಅಂಥ ಜೀವನ ನರಕಯಾತನೆಯನ್ನು ನೀಡುತ್ತದೆ. ಆದ್ದರಿಂದ ಶರಣರ ಪಾದದ ಬಳಿ ನನ್ನನ್ನಿರಿಸು; ಅರ್ಥಾತ್ ಶರಣರು ನನ್ನನ್ನು ಅಕ್ಕರತೆಯಿಂದ ಕಾಣುವಂತೆ ಮಾಡು ಎಂದು ಮಹಾದಾನಿಯಾದ ಲಿಂಗದೇವನಲ್ಲಿ ಬೇಡುತ್ತಾರೆ ಗುರುಬಸವಣ್ಣನವರು.

364. ಸದ್ಭಕ್ತರನರಿದಿಪ್ಪ ಮಹಾಪದವಿ

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ,
ನಾನು ಮತ್ತಾವ ಪದವಿಯನೊಲ್ಲೆನಯ್ಯಾ
ಲಿಂಗದೇವಾ, ನಿಮ್ಮ ಸದ್ಭಕ್ತರ
ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ. – ಬ.ವ.ದೀ 361

ಪುರಾಣಗಳಲ್ಲಿ ವಿವಿಧ ಪದವಿಗಳ ಪ್ರಸ್ತಾಪವಾಗುತ್ತದೆ. ಇಂದ್ರ ಪದವಿ, ಬ್ರಹ್ಮ ಪದವಿ, ವಿಷ್ಣು ಪದವಿ, ರುದ್ರ ಪದವಿ ಎಂಬ ಪದವಿಗಳುಂಟು. ಆ ಪದವಿಗಳನ್ನು ಪಡೆಯಬೇಕಾದರೆ ವಿವಿಧ ಪುಣ್ಯಕಾರ್ಯಗಳನ್ನು ಮಾಡಬೇಕೆಂಬ ಪಟ್ಟಿಯನ್ನು ಕೊಡಲಾಗುತ್ತದೆ. ಮಾತ್ರವಲ್ಲ ಈ ಪದವಿಗಳನ್ನೂ ಪಡೆಯಲು ಅಸುರರು ಮತ್ತು ಸುರರ ನಡುವೆ ಸಾಕಷ್ಟು ಯುದ್ಧಗಳೂ ಆಗಿರುವುದನ್ನು ಪುರಾಣಗಳಲ್ಲಿ ಓದುತ್ತೇವೆ.

ಇನ್ನೊಂದು ರೀತಿಯಿಂದ ಅರ್ಥ ಮಾಡುವುದಾದರೆ ರಾಜರ ಆಸ್ಥಾನಗಳಲ್ಲಿ ವಿವಿಧ ಪದವಿ, ಬಿರುದುಗಳನ್ನು ಕೊಡಲಾಗುತ್ತಿತ್ತು. ಇದಕ್ಕಾಗಿ ಪಂಡಿತರು, ವಿದ್ವಾಂಸರ ಮಧ್ಯೆ ಪೈಪೋಟಿ, ಸ್ಪರ್ಧೆ ಏರ್ಪಡುತ್ತಿದ್ದವು. ಗೆದ್ದವರಿಗೆ ವಿವಿಧ ಪದವಿಯ ಜೊತೆಗೆ ಹೊನ್ನು, ರತ್ನಹಾರ, ಕೈಗಡಗ, ಕಾಲ್ಗಡಗ ಮುಂತಾದವು ಕೊಡಲ್ಪಡುತ್ತಿದ್ದವು. ಅವರು ಅವುಗಳನ್ನು ಧರಿಸಿ, ಹೆಮ್ಮೆಯಿಂದ ಪ್ರದರ್ಶಿಸುತ್ತ, ಟಗರಿನಂತೆ ಹೂಂಕರಿಸುತ್ತ ಸವಾಲು ಎಸೆಯುತ್ತ ಓಡಾಡುತ್ತಿದ್ದರು. ಆದರೆ ಶರಣರು, ಸಂತರ ದಾರಿಯೇ ಬೇರೆ. ಅವರು ಪದವಿ, ಪ್ರಶಸ್ತಿ, ಪುರಸ್ಕಾರಗಳ ಬೆನ್ನು ಹತ್ತುವವರಲ್ಲ. [ಇಂದು ತಾನೇ ದಿನ ಪತ್ರಿಕೆಯೊಂದರಲ್ಲಿ ವ್ಯಂಗ್ಯ ಚಿತ್ರವೊಂದು ಬಂದಿತ್ತು. ಗದಗಿನಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷರು ಸಾಹಿತಿಗಳನ್ನು ಕುರಿತು, "ನೀನು ಶೋಷಿತರ ಪರವೋ, ಶೋಷಕರ

ಪರವೋ ಎಂದು ಕೇಳಿದ್ದಕ್ಕೆ ಪ್ರತಿಕ್ರಿಯೆಯಾಗಿ ಈ ವ್ಯಂಗ್ಯ ಚಿತ್ರದಲ್ಲಿ ಹೇಳಲಾಗಿತ್ತು: "ನಾವೇನೋ ಶೋಷಿತರ ಪರವೆ, ಆದರೆ ಪ್ರಶಸ್ತಿ, ಪುರಸ್ಕಾರಗಳಿಗಾಗಿ ಶೋಷಕರ ಜೊತೆ ಓಡಾಡಬೇಕಾಗುತ್ತದೆ" ಎಂದು. ಏಕೆಂದರೆ ಇಂದು ಪ್ರಶಸ್ತಿ, ಪುರಸ್ಕಾರ, ಬಿರುದು, ಗೌರವ ಡಾಕ್ಟರೇಟ್ ಬಹುಪಾಲು ಹಣ ಮತ್ತು ಶಿಫಾರಸ್ಸಿನ ಮೇಲೆ ನಿಂತಿವೆ ಎನ್ನುವುದು ಭಾರತ ದೇಶದಲ್ಲಿ ಜನಜನಿತವಾಗಿರುವ ಸತ್ಯ]

ಈ ಎಲ್ಲ ಪದವಿಗಿಂತ ಮಿಗಿಲಾದುದು ಸದ್ಭಕ್ತರನರಿದಿಪ್ಪ ಪದವಿ, ಒಡನಾಡುವ ಭಾಗ್ಯ ಶರಣರ ಒಡನಾಟ ಎಲ್ಲಕ್ಕೂ ಮಿಗಿಲಾದ ಪದವಿ-ಗುರುಬಸವಣ್ಣನವರ ದೃಷ್ಟಿಯಲ್ಲಿ.

365. ಶರಣರ ಚಮ್ಮಾವುಗೆಯಾಗುವುದೇ ಲೇಸು

ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ
ಅಯ್ಯಾ, ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ !
ಲಿಂಗದೇವಾ, ನಿಮ್ಮ ಸೆರಗೊಡ್ಡಿ ಬೇಡುವೆ
ಇದೊಂದೇ ವರವ ಕರುಣಿಸಯ್ಯಾ — ಬ.ವ.ದೀ 362

ದೇವಾಲಯದ ಕಳಸ ಶ್ರೇಷ್ಠವೋ? ಶರಣರ ಪಾದ ಮೆಟ್ಟುವ ಚಮ್ಮಾವುಗೆ ಶ್ರೇಷ್ಠವೋ? ಅರಸರ ಮನೆಯಲ್ಲಿ ಅರಸಿಯಾಗಿಪ್ಪುದು ಶ್ರೇಷ್ಠವೋ ಭಕ್ತರ ಮನೆಯಲ್ಲಿ ಸೇವಕರಾಗಿರುವುದು ಶ್ರೇಷ್ಠವೋ ಎಂಬ ಪ್ರಶ್ನೆಯಂತಿದೆ ಇದು. ಶರಣ ಸಾಧಕರಾದ ಬಸವಣ್ಣನವರು ಅರಸಿಯ ಪಟ್ಟಕ್ಕಿಂತ ಭಕ್ತರ ಮನೆಯ ಭೃತ್ಯಾಚಾರವನ್ನೇ ಬಯಸುವವರು. ಅದರಂತೆ ಅವರ ದೃಷ್ಟಿಯಲ್ಲಿ ದೇವಾಲಯದ ಬಂಗಾರದ ಕಳಸವಾಗುವುದಕ್ಕಿಂತಲೂ ಶರಣರು ಮೆಟ್ಟುವ ಚಮ್ಮಾವುಗೆಯಾಗುವುದೇ ಶ್ರೇಷ್ಠ. ಏಕೆಂದರೆ ಅತಿ ಎತ್ತರದಲ್ಲಿರುವ ಗುಡಿಯ ಕಳಸಕ್ಕೆ ಲಭ್ಯವಾಗುವುದು ಕಾಗೆಯ ಮಲಮೂತ್ರಾಭಿಷೇಕ. ಪಾದದ ಕೆಳಗಿರುವ ಚಮ್ಮಾವುಗೆಗೆ ಸಿಕ್ಕುವುದು ಮಹಾತ್ಮರ ಪಾದಸ್ಪರ್ಶ. ಅದಕ್ಕಾಗಿ ಮಹಾದಾನಿ ಲಿಂಗದೇವನಲ್ಲಿ ಬೇಡುತ್ತಾರೆ, "ಪವಿತ್ರಾತ್ಮರಾದ ಶರಣರ ಚಮ್ಮಾವುಗೆಯನ್ನಾಗಿ ಮಾಡು"ಎಂದು.

366. ಜಂಗಮ ದಾಸೋಹಿಯ ಸಂಗ ನೀಡು

ಆವಾವ ಭಾವದಲ್ಲಿ ಮಾಡಿ ಕೂಡಿಹೆವೆಂಬವರ ಬಾಗಿಲ ತೋರಯ್ಯಾ
ತನುವನೊಪ್ಪಿಸಿದವರ ಮನವನೊಪ್ಪಿಸಿದವರ, ಧನವನೊಪ್ಪಿಸಿದವರ
ಬಾಗಿಲ ತೋರಯ್ಯಾ
ಇವನೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆಂಬವರ
ಕೆರಹ ಹೊತ್ತಿರಿಸೆನ್ನ ಲಿಂಗದೇವಾ. — ಬ.ವ.ದೀ 363

"ಆವಾವ ಭಾವದಲ್ಲಿ ಅಂದರೆ ತಮತಮಗೆ ಸಾಧ್ಯವಾಗುವ ಪರಿಯಲ್ಲಿ ದಾಸೋಹ (ಸೇವೆ)ವ ಮಾಡಿ, ಶರಣರ ಸತ್ಸಂಗದಲ್ಲಿ ಕೂಡಿ ಬದುಕುವವರ ಬಾಗಿಲ ತೋರಯ್ಯ" ಎಂದು ಗುರುಬಸವಣ್ಣನವರು ದೇವರಲ್ಲಿ ಬೇಡುತ್ತಾರೆ. ಏಕೆಂದರೆ ತನು ಮನ ಧನ ಈ ಮೂರರಲ್ಲಿ ಯಾವುದನ್ನು ನೀಡಿದರೂ ಅದು ಸುತ್ತ್ಯಾರ್ಹ. ಒಬ್ಬ ವ್ಯಕ್ತಿ ಮನ ಸಿರಿವಂತ ಅಂದರೆ ಬುದ್ಧಿವಂತ ಅಲ್ಲದಿರಬಹುದು ; ಧನವಂತನು ಇಲ್ಲದಿರಬಹುದು. ಬಸವ ಮಂಟಪಕ್ಕೆ ಬಂದು ಕಸ ಗುಡಿಸಿ, ಒರೆಸಿ ಪ್ರಾರ್ಥನೆಗೆ ಸಿದ್ಧಪಡಿಸುತ್ತಾನೆ. ಜಮಖಾನಾ ಎತ್ತುತ್ತಾನೆ; ಶರಣರು ಪ್ರಸಾದ ಮಾಡಿದ

ತಟ್ಟೆ ತೆಗೆಯುತ್ತಾನೆ. ಇದೇನು ಸಾಮಾನ್ಯ ಸೇವೆಯೆ? ಮತ್ತೊಬ್ಬ ಬುದ್ಧಿವಂತ, ಜ್ಞಾನವಂತ. ಆದರವನಿಗೆ ಶರೀರವನ್ನು ದುಡಿಸಿ ಮಾಡುವ ಶ್ರಮ ಜೀವನ ಇಷ್ಟವಿಲ್ಲ. ಮತ್ತೊಬ್ಬ ಧನವಂತ, ಅವನು ಸೇವೆ ಮಾಡುವ ಪ್ರವೃತ್ತಿ ಇರುವವನಲ್ಲ ಮತ್ತು ಜ್ಞಾನಿಯೂ ಅಲ್ಲ ಉದಾರವಾಗಿ ಕೆಲಸ ಕಾರ್ಯಗಳಲ್ಲಿ ಧನ ಸಹಾಯ ಮಾಡುತ್ತಾನೆ. ಕೆಲವು ಜನರ ಟೀಕೆ ಹೀಗಿರುತ್ತದೆ, "ಅವನಿಗೆ ಭಾಷಣ ಮಾಡುವ ಹವ್ಯಾಸವಿದೆಯೇ ವಿನಾ ಸೇವೆ ಮಾಡುವುದಿಲ್ಲ. "ಒಂದೊಂದು ಕೊರತೆಯನ್ನು ಪ್ರಸ್ತಾಪಿಸಿ ಹೀಗೆ ಟೀಕೆ ಮಾಡುವುದರಿಂದ ಅವರನ್ನು ಶರಣರ ಒಕ್ಕೂಟದಿಂದ ಕಳೆದುಕೊಳ್ಳಬೇಕಾಗುತ್ತದೆ. ಯಾರ್‍ಯಾರು ಯಾವ ರೀತಿ ಸೇವೆ ಮಾಡುವರೋ ಅದನ್ನು ಸ್ವೀಕರಿಸಬೇಕು ತನಗೆ ಸಾಧ್ಯವಾದುದನ್ನು ತಾನು ಮಾಡಬೇಕು. ಲಿಂಗಾಯತ ಧರ್ಮದ ಅನುಯಾಯಿಯಾಗಿಯೂ ತನುಮನಧನ ಯಾವುದರಿಂದಲೂ ಸೇವೆ ಸಲ್ಲಿಸದವರ ಮನೆಯ ಬಾಗಿಲಿಗೆ ಸಹಧರ್ಮೀಯರು ಹೋಗುವುದು ಬೇಡ.

ಈ ತ್ರಿವಿಧ ಸಂಪತ್ತನ್ನು ಒಪ್ಪಿಸಿ ಧನವನ್ನು ನೀಡಿ, ಮನಃ ಪೂರ್ವಕವಾಗಿ ಧರ್ಮಪ್ರಚಾರ ಮಾಡಿ, ಕೆಲಸ ಕಾರ್ಯ ನಡೆದಾಗ ನಿಂತು ತನುಸೇವೆ ಮಾಡುತ್ತ ಜಂಗಮ ಅರ್ಥಾತ್ ಸಮಾಜದವರು 'ಎನ್ನವರು', 'ಎನ್ನವರು' ಎಂಬ ಸಮಾಜ ಪ್ರೇಮಿಗಳ ಕೆರಹನ್ನು ಹೊತ್ತು ಇರಿಸು ಎಂದು ಗುರುಬಸವಣ್ಣನವರು ಬೇಡುತ್ತಾರೆ. ಇದರರ್ಥ ಸೇವೆ ಮಾಡುವವರು ಎಲ್ಲರಿಗಿಂತ ಶ್ರೇಷ್ಠ ಎಂಬ ತತ್ತ್ವ

367. ಭೃತ್ಯಾಚಾರದ ಬಯಕೆ

ಆಯತ, ಸ್ವಾಯತದನುಭಾವವ ನಾನೆತ್ತ ಬಲ್ಲೆನು?
ಲಿಂಗಜಂಗಮಕ್ಕೆ ಮಾಡಿ ನೀಡುವ
ಅಚ್ಚ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ;
ಇದು ಕಾರಣ, ಲಿಂಗದೇವನ ಶರಣರಲ್ಲದೆ ಅನ್ಯವನರಿಯೆನಾಗಿ. — ಬ.ವ.ದೀ 364

ಲಿಂಗಜ್ಞಾನಕ್ಕೆ ಸಂಬಂಧಿಸಿದಂತೆ 3 ಕ್ರಿಯೆಗಳುಂಟು. ಅವೆಂದರೆ, ಆಯತ, ಸ್ವಾಯತ, ಸನ್ನಿಹಿತ. ಆಯತವೆಂದರೆ ನಿರಾಕಾರ ನಿರ್ಗುಣನಾದ ಸೃಷ್ಟಿಕರ್ತ ಲಿಂಗದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಗುರುವಿನ ಮೂಲಕ ಪಡೆದು ಎದೆಯ ಮೇಲೆ ಧರಿಸಿಕೊಳ್ಳುವುದು. ನಿರಾಕಾರ ದೇವನು ದೇಹದಲ್ಲಿ ಆತ್ಮನ ರೂಪದಲ್ಲಿ ನೆಲೆಸಿದ್ದಾನೆಂದು ತಿಳಿದು ಅದರ ಅನುಭವವನ್ನು ಪಡೆಯುವುದು ಸ್ವಾಯತ; ಬ್ರಹ್ಮಾಂಡಗತ ಚೈತನ್ಯವಾದ ಭಾವಲಿಂಗ ಅಥವಾ ಮಹಾಲಿಂಗದ ದಿವ್ಯದರ್ಶನಾನುಭವವನ್ನು ಹೊಂದುವುದು ಸ್ನನಿಹಿತ. ಇಂಥ ದಿವ್ಯ ಅನುಭವಗಳನ್ನು ನಾನೆತ್ತ ಬಲ್ಲೆನು? ನನಗೆ ಅದರಲ್ಲಿ ಆಸಕ್ತಿಯೂ ಇಲ್ಲ. [ಧರ್ಮಪಿತರು ಜಂಗಮ ದಾಸೋಹಕ್ಕೆ ಮಹತ್ವ ಕೊಡಲು ಹೀಗೆ ಹೇಳಿದ್ದಾರೆ. ಅವರು ಈ ಎಲ್ಲಾ ದಿವ್ಯಾನುಭವಗಳನ್ನು ಪಡೆದ ಸಿದ್ಧಪುರುಷರಾಗಿದ್ದಾರೆ] ಯಾರು ಇಷ್ಟಲಿಂಗ ಪೂಜೆಯನ್ನು ನಿಷ್ಠೆಯಿಂದ ಮಾಡುವರೋ, ಜಂಗಮ ದಾಸೋಹವನ್ನು ಆದರದಿಂದ ಮಾಡುವರೋ ಅಂಥ ಅಪ್ಪಟ ಶರಣರ ಮನೆಯಲ್ಲಿ ಸೇವಕನಾಗಿ ಇರಲು ಬಯಸುತ್ತೇನೆ. ಲಿಂಗದೇವನ ಶರಣರಲ್ಲದೆ ಬೇರೆ ಯಾವುದರ ಬಗ್ಗೆಯೂ ಚಿಂತಿಸದಷ್ಟು ಶರಣ ಪ್ರೇಮ ನನ್ನದು.

368. ದೇವನ ನೆನಹಿನಲ್ಲೇ ತನ್ಮಯ

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ;
ಅಂಬುಜಕೆ ಭಾನುವಿನ ಉದಯದ ಚಿಂತೆ;
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಲಿಂಗದೇವರ ನೆನೆವುದೇ ಚಿಂತೆ; — ಬ.ವ.ದೀ 365

ಚಕೋರ ಪಕ್ಷಿ ಚಂದ್ರನ ಬೆಳಕು ಯಾವಾಗ ಉದಿಸುವುದೋ ಎಂದು ಹಂಬಲಿಸುವುದು. ಬೆಳದಿಂಗಳು ಹಬ್ಬಿದಾಗ ಅದರ ಬೆಳಕಿನಲ್ಲಿ ಲೀಲಾಜಾಲವಾಗಿ ತನ್ಮಯತೆಯಿಂದ ಹಾರಾಡುವುದು. ತಾವರೆ ಹೂವು ಇಡೀ ರಾತ್ರಿ ಮುದುಡಿಕೊಂಡಿದ್ದು ಸೂರ್ಯೋದಯ ಯಾವಾಗ ಆಗುವುದೋ ಎಂದು ಹಂಬಲಿಸುವುದು. ಸೂರ್ಯಕಿರಣಗಳು ಬೀಳುತ್ತಿದ್ದಂತೆಯೇ ಕುಲು ಕುಲು ನಗುವಂತೆ ದಳ ತೆರೆದು ಅರಳುವುದು. ಭ್ರಮರವು ಹೂವಿನಲ್ಲಿರುವ ಮಕರಂದವನ್ನು ಪಾನ ಮಾಡಲೋಸುಗ ಹಂಬಲಿಸಿ, ಹಾರಾಡುವುದು. ಮಕರಂದ ಸಹಿತ ಪುಷ್ಪವು ದೊರೆತಾಗ ಆ ಮಕರಂದವನ್ನು ಪಾನ ಮಾಡುತ್ತ ಮಾಡುತ್ತ ತನ್ಮಯತೆಯಿಂದ ಮೈಮರೆಯುವುದು. ಅಂಥ ತನ್ಮಯ ಸ್ಥಿತಿ ಪ್ರಾಪ್ತವಾಗುವವರೆಗೆ ಇವೆಲ್ಲವು ಹಂಬಲಿಸುವಂತೆ ಲಿಂಗದೇವನೊಡನೆ ತಾದಾತ್ಮ್ಯ ಸ್ಥಿತಿ ಪ್ರಾಪ್ತವಾಗುವವರೆಗೆ ನನಗೆ ಆ ಲಿಂಗದೇವನನ್ನು ನೆನೆಯುವ ಚಿಂತೆ ಆವರಿಸಿಕೊಂಡಿದೆ" ಎನ್ನುತ್ತಾರೆ ಗುರುಬಸವಣ್ಣನವರು.

369. ಶರಣರಿಗಾಗಿ ಹಂಬಲ

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ;
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ ;
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು.
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು ಲಿಂಗದೇವಾ. – ಬ.ವ.ದೀ 366

ಸಂತೆ ಅಥವಾ ಜಾತ್ರೆಯಲ್ಲಿ ಕಳೆದುಕೊಂಡ, ದಾರಿತಪ್ಪಿದ ಮಗುವು ತನ್ನ ಮನೆಗೆ ಹೋಗುವ ದಾರಿಯನ್ನು ಅರಿಯದೆ ತಾಯಿಯನ್ನು ಬಯಸುವುದು. ಪರಮಾತ್ಮನೆಂಬ ತಾಯಿಯಿಂದ ದೂರವಾಗಿರುವ ಜೀವಾತ್ಮವೆಂಬ ಶಿಶುವು ತನ್ನ ನಿಜ ನೆಲೆ ದೇವನನ್ನು ಸೇರುವ ದಾರಿ ತಿಳಿಯದೆ ದಾರಿ ತೋರಿಸಬಲ್ಲ ಶರಣರಿಗಾಗಿ ಹಂಬಲಿಸುವುದು. ಹಾಗೆಯೇ ಹುಲ್ಲು ಮೇಯುವ ಆಸೆಯಿಂದ ಅರಣ್ಯದಲ್ಲಿ ಉಳಿದು ತನ್ನ ಹಿಂಡಿನ ಸಂಪರ್ಕವನ್ನು ಕಳೆದುಕೊಂಡ ಪಶುವು ತನ್ನ ಹಿಂಡನ್ನು ಕೂಡಿಕೊಳ್ಳಲು ಆತುರ ಪಡುವುದು. ಹಾಗೇ ಜಗತ್ತೆಂಬ ಅರಣ್ಯದಲ್ಲಿ ಶರಣರು, ಸಂತರು ಮುಂತಾದವರ ಸತ್ಸಂಗದ ಬಳಿ ತಪ್ಪಿದ ಸಾಧಕರೆಂಬ ಜೀವಿಗಳ ತಾವೂ ಜ್ಞಾನಿಗಳು, ಒಡನಾಡಲು ಹಂಬಲಿಸುವರು. ಅದೇ ರೀತಿಯಲ್ಲಿ ಗುರುಬಸವಣ್ಣನವರು ಶರಣರ ಬರುವನ್ನು ಬಯಸುತ್ತಾರೆ, ಭಕ್ತರ ಬರುವಿಗಾಗಿ ಹಂಬಲಿಸುತ್ತಾರೆ.

ಸೂರ್ಯದ ಉದಯವಾಗುತ್ತಲೇ ಕಮಲದ ಹೂವು ಮುದದಿಂದ ಅರಳುವಂತೆ ಶರಣರ ಬರುವಿನಿಂದ ಗುರುಬಸವಣ್ಣನವರಿಗೆ ಅಪಾರ ಆನಂದವಾಗುವುದು.

370. ಶರಣರ ಬರುವು ಪ್ರಾಣ ಜೀವಾಳ

ಸೂರ್ಯನುದಯ ತಾವರೆಗೆ ಜೀವಾಳ
ಚಂದ್ರಮನುದಯ ನೈದಿಲೆಗೆ ಜೀವಾಳ
ಕೂಪರ ಠಾವಿನಲ್ಲಿ ಕೂಟ ಜೀವಾಳ
ಒಲಿದ ಠಾವಿನಲ್ಲಿ ನೋಟ ಜೀವಾಳವಯ್ಯ
ಲಿಂಗದೇವನ ಶರಣರ ಬರುವೆನಗೆ ಪ್ರಾಣ ಜೀವಾಳವಯ್ಯಾ – ಬ.ವ.ದೀ 367

ಹಗಲಿನಲ್ಲಿ ಅರಳುವ ಸೂರ್ಯನ ಉದಯದಿಂದ ತಾವರೆಗೆ ಚೈತನ್ಯ ಬಂದಂತೆ ಅರಳುವುದು. ಅದೇ ರೀತಿ ರಾತ್ರಿಯಲ್ಲಿ ಅರಳುವ ನೈದಿಲೆಗೆ ಚಂದ್ರನ ಕಿರಣಗಳಿಂದ ಚೈತನ್ಯ ಬಂದಂತೆ ಆಗಿ ಅದು ದಳ ತೆರೆದು ಅರಳುವುದು. ಪರಸ್ಪರ ಆತ್ಮೀಯರಾದವರ ಭೇಟಿಯಿಂದ ಹರ್ಷ, ಉಲ್ಲಾಸಗಳು

ಚಿಗುರೊಡೆಯುವುವು. ಪರಸ್ಪರ ಒಲಿದ ಪ್ರೇಮಿಗಳು ಅಥವಾ ಸ್ನೇಹಿತರ ನೋಟವೇ ಸ್ಫೂರ್ತಿದಾಯಕವಾಗುವುದು. ಅದೇ ರೀತಿ ಲಿಂಗದೇವನಿಗೊಲಿದ ಶರಣರ ಬರುವು ಗುರುಬಸವಣ್ಣನವರಿಗೆ ಪ್ರಾಣ ಚೈತನ್ಯವನ್ನೇ ತರುವುದು.

371. ಗಣ ತಿಂಥಿಣೆಗಾಗಿ ಬೇಡಿಕೆ

ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ;
ಗಣತಿಂಥಿಣಿಯೊಳಗಿರಿಸೆನ್ನನು, ತಂದೆ
ಶಿವ ಶಿವಾ, ಲಿಂಗದೇವಾ,
ಸೆರಗೊಡ್ಡಿ ಬೇಡುವೆನು. – ಬ.ವ.ದೀ 368

ನೀರಿನಿಂದ ಹೊರತೆಗೆದ ಮೀನು ಬದುಕಲು ಸಾಧ್ಯವೇ? ಅದೇ ರೀತಿ ಶರಣರ ಸಮೂಹದಲ್ಲಿ ನಡೆಯುವ ಸತ್ಸಂಗವನ್ನು ಬಿಟ್ಟು ನಾನು ಇರಲಾರೆನಾದ ಕಾರಣ ಶರಣರ ಮಧ್ಯೆ ನನ್ನನ್ನು ಇರಿಸು. ಲಿಂಗದೇವಾ, ನಾನು ಇನ್ನೇನನ್ನೂ ಬೇಡುವುದಿಲ್ಲ, ಇದೊಂದು ವರವನ್ನು ನೀಡು.

373. ಶರಣರ ಸಂಗವಿಲ್ಲದೆ ಬದುಕಲಾರೆನು

ಅಯ್ಯಾ, ನಿಮ್ಮ ಮಹಾನುಭಾವಿಗಳನಗಲಿ ಬದುಕಲಾರೆನು,
ಶಿವಧೋ, ಶಿವಧೋ ಕಂಗಳಶ್ರುಗಳಲ್ಲಿ ಮುಂದುಗಾಣೆನು,
ಲಿಂಗಸಂಗಿಗಳನಗಲಿ ನಾನೆಂತು ಬದುಕುವೆ, ಲಿಂಗದೇವಾ ?– ಬ.ವ.ದೀ 369

"ಲಿಂಗದೇವಾ, ನಿಮ್ಮ ದಿವ್ಯಾನುಭವವನ್ನು ಹೊಂದಿದ ಶರಣರ ಒಡನಾಟದಿಂದ ದೂರವಾದರೆ ನಾನು ಬದುಕಲಾರೆನು. ಶರಣರನ್ನು ಬೀಳ್ಕೊಡಬೇಕಾಗಿ ಬಂದಾಗ ನನ್ನ ಕಣ್ಣಲ್ಲಿ ಅಶ್ರುಧಾರೆಯೇ ಸುರಿಯುತ್ತದೆ. ಶಿವನೇ ಆ ಅಶ್ರುಧಾರೆಯ ತೆರೆಯಿಂದಾಗಿ ಮುಂದಿನ ದಾರಿಯೂ ತಿಳಿಯದು. ಇಷ್ಟಲಿಂಗಧಾರಿಗಳಾದ (ಲಿಂಗಜ್ಞಾನವನ್ನು ಹೊಂದಿದ) ಶರಣರನಗಲಿ ನಾನು ಹೇಗೆ ಬದುಕಲಿ?" ಎಂದು ಧರ್ಮಪಿತ ಬಸವಣ್ಣನವರು ಪರಿತಪಿಸುತ್ತಾರೆ.

374. ಒಬ್ಬರೇ ಉಳಿದ ವಿಷಾದ ಗೀತೆ

ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ನೋಡಯ್ಯಾ!
ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು ನೋಡಯ್ಯಾ!
ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು,
ನಾನೊಬ್ಬನೆ ಉಳಿದೆನು ಲಿಂಗದೇವಾ, ನಿಮ್ಮ ಶರಣರನಗಲಿದ ಕಾರಣ !
– ಬ.ವ.ದೀ 370

ಈ ಎರಡು ವಚನಗಳು ನೋವಿನಿಂದ ಬರೆಯಲ್ಪಟ್ಟವು. ಇವು ಒಂದು ಐತಿಹಾಸಿಕ ಘಟನೆಯನ್ನು ವಿವರಿಸುವ ದಾಖಲೆಗಳು. ವರ್ಣಾಂತರ ವಿವಾದ ನಂತರ ಧರ್ಮಪಿತರು ತಾವಾಗಿಯೇ ಕಲ್ಯಾಣವನ್ನು ಬಿಡಲಿಲ್ಲ. ಒಂದು ಅನಿವಾರ್ಯ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿದರು. ಅದೇ ಗಡಿಪಾರು ಸಿಕ್ಷೆ. ಇದಕ್ಕೆ ಪೂರಕವಾಗಿ ಇನ್ನೊಂದು ವಚನವೂ ಇದೆ.

ಅರಸು ಮುನಿದಡೆ ನಾಡೊಳಗಿರಬಾರದಯ್ಯಾ;
ಗಂಡ ಮುನಿದಡೆ ಹೆಂಡತಿ ಮನೆಯೊಳಗೆ ಇರಬಾರದಯ್ಯ,
ಲಿಂಗದೇವಾ, ಜಂಗಮ ಮುನಿದಡೆ ನಾನೆಂತು ಬದುಕುವೆ ? – ಬ.ವ.ದೀ 820

ಗುರುಬಸವಣ್ಣನವರ ಮುಂದೆ ಇದ್ದುದು ಎರಡು ಮಾರ್ಗ. ಒಂದು, ಗಡಿಪಾರು ಶಿಕ್ಷೆ ಒಪ್ಪಿಕೊಳ್ಳುವುದು. ಎರಡು, ರಾಜನೊಡನೆ ಸೆಣಸುವುದು. ರಕ್ತ ಕ್ರಾಂತಿಯಿಂದ ಅಪಾರ ನಷ್ಟ ಮತ್ತು ಏನನ್ನೂ ಸಾಧಿಸಲು ಆಗುವುದಿಲ್ಲ ಅದಕ್ಕಾಗಿ ಅವರು ಗಡಿಪಾರು ಶಿಕ್ಷೆ ಒಪ್ಪಿಕೊಂಡರು.

ಹೀಗಾಗಿ ಶರಣರನ್ನು ಅಗಲಿ ದೂರ ಹೋಗಬೇಕಾಯಿತು. ಇದು ಅವರಿಗೆ ಅತೀವ ನೋವಿನ ಸಂಗತಿ. ಹೀಗಾಗಿ ಶರಣ ಸಮೂಹವನ್ನು ಅಗಲುವಾಗ ಅವರ ಕಣ್ಣು ತುಂಬಿ ಬಂದಿದೆ. ಮಾನಸಿಕವಾಗಿ ಜಜ್ಜನೆ ಜರಿದು ಹೋಗಿದ್ದಾರೆ. ಹೃದಯವು ಬಿಬ್ಬನೆ ಬಿರಿದಿದೆ. ಒಬ್ಬರೇ ಉಳಿದಿದ್ದಾರೆ, ಏಕೆಂದರೆ ಅವರು ಶರಣರ ಸಮೂಹವನ್ನು ಅನಿವಾರ್ಯವಾಗಿ ಅಗಲಿದ್ದಾರೆ.

(ಮುಂದುವರಿಯುವುದು)

ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಪ್ರವೇಶಾವಕಾಶ

ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಅನಾಥಾಲಯ, ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಇವುಗಳಿಗೆ ಪ್ರವೇಶಾವಕಾಶವಿದೆ.

1. ವೃದ್ಧಾಶ್ರಮ : 60 ವರ್ಷ ಮೇಲ್ಪಟ್ಟ ಸ್ತ್ರೀಯರು ಹಾಗೂ ಪುರುಷರಿಗೆ ಅವಕಾಶ ಮಕ್ಕಳಿಲ್ಲದವರು, ಮಕ್ಕಳಿದ್ದೂ ಆಶ್ರಯವಿಲ್ಲದವರು, ನಿರ್ಗತಿಕ ವಯೋವೃದ್ಧರು ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2. ಶುಲ್ಕ ಸಹಿತವಾಗಿ ಪ್ರತ್ಯೇಕ ಮನೆ (ಕಾಟೇಜ್)ಯಲ್ಲಿ ಇರಬಯಸುವವರಿಗೆ ಟ್ರಸ್ಟ್ ವಿಶೇಷ ವ್ಯವಸ್ಥೆ ಮಾಡಲಿದೆ. ದಂಪತಿಗಳೇ ಇರಲಿ, ಒಬ್ಬರೇ ಇರಲಿ ಅವರ ಖರ್ಚಿಗಾಗಿ ನಿಗದಿಪಡಿಸಿದ ಶುಲ್ಕ ಕೊಡುವವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು.
3. ಬಸವ ಗಂಗೋತ್ರಿ ಸಂಸ್ಥೆಯು ರಾಜರಾಜೇಶ್ವರಿ ಎಂಜನಿಯರಿಂಗ್ ಕಾಲೇಜ್ ಡಾನ್ ಬಾಸ್ಕೊ ಎಂಜನಿಯರಿಂಗ್ ಕಾಲೇಜ್, ಎಂ.ಬಿ.ಎ., ಕಾಲೇಜ್ ಮುಂತಾದುವಕ್ಕೆ ತೀರಾ ಹತ್ತಿರದಲ್ಲಿ ಇರುವುದರಿಂದ ಆಯ್ದ ವಿದ್ಯಾರ್ಥಿಗಳಿಗೆ ಪೇಯಿಂಗ್ ಗೆಸ್ಟ್ ವ್ಯವಸ್ಥೆಯಿದ್ದು ವಸತಿ ಮತ್ತು ಊಟದ ಅನುಕೂಲತೆ ಇದೆ. ಅವರಿಗೆ ಬಸವ ದರ್ಶಿನಿ ಹೋಟೆಲ್‌ದವರು ಊಟದ ವ್ಯವಸ್ಥೆ ಮಾಡುತ್ತಾರೆ. ಸೀಮಿತ ಸಂಖ್ಯೆಯಲ್ಲಿ ಪ್ರವೇಶಾವಕಾಶವಿದೆ.
4. ಅನಾಥಾಲಯ : ತಾಯಿ ಅಥವಾ ತಂದೆ ಇಬ್ಬರೂ ಇಲ್ಲದವರು, ಅಥವಾ ಇಬ್ಬರಲ್ಲಿ ಒಬ್ಬರು ತೀರಿಕೊಂಡವರು ಇದಕ್ಕೆ ಅರ್ಹರು. ಒಂದನೆಂಯ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಪ್ರವೇಶಾವಕಾಶ.
5. ಆಶಾಕಿರಣ ಯೋಜನೆ : ಇದರ ಅನ್ವಯ ಒಂದರಿಂದ ಏಳನೆಯ ತರಗತಿಯವರೆಗೆ 14 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಪ್ರವೇಶಾವಕಾಶ. ತಾಯಿ/ತಂದೆ ಇದ್ದರೂ ಪರವಾಗಿಲ್ಲ, ಬಡ ಮತ್ತು ಪ್ರತಿಭಾವಂತ ಮಕ್ಕಳಿಗೆ ವಿಶೇಷ ಶಿಕ್ಷಣ.

ಈ ಎಲ್ಲ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕೆಂಬ ಮತ್ತು ಆವಶ್ಯಕತೆ ಇರುವ ಜನರು ವ್ಯವಹರಿಸುವ ವಿಳಾಸ.

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ,
ವ್ಯವಸ್ಥಾಪಕರು
ಬಸವಗಂಗೋತ್ರಿ ಆಶ್ರಮ
ಕುಮಬಳಗೋಡು – 560 074
ಬೆಂಗಳೂರು – ಮೈಸೂರು ಹೆದ್ದಾರಿ
ಬೆಂಗಳೂರು ದಕ್ಷಿಣ ತಾಲ್ಲೋಕು.

ಸಿಟಿ ಮಾರುಕಟ್ಟೆಯಿಂದ ಬಸವ ಗಂಗೋತ್ರಿಗೆ
ಹೋಗುವ ಸಿಟಿ ಬಸ್ಸುಗಳು
223, 224, 226
ಮೆಜೆಸ್ಟಿಕ್‌ನಿಂದಲೂ ಬಸ್ಸುಗಳು,
ಬಿಡದಿ, ರಾಮನಗರ – ಹೀಗೆ
ಸಂಚರಿಸುತ್ತವೆ.

1. ದೇವರ ಇಚ್ಛೆ ಅರಿತವರಾರು ?

ಒಂದು ದೃಷ್ಟಾಂತ ಕಥೆ ಮನಸ್ಸಿಗೆ ಬಹಳ ಹಿಡಿಸಿತು. ಒಮ್ಮೆ ತಂದೆ ಮುಖ ಕ್ಷೌರ ಮಾಡಿಕೊಳ್ಳುತ್ತ ಕುಳಿತಿರುತ್ತಾನೆ. ಅಲ್ಲಿಗೆ ನಾಲ್ಕೈದು ವರ್ಷದ ಪುಟ್ಟ ಮಗ ಆಟವಾಡಿಕೊಳ್ಳುತ್ತ ಬರುತ್ತಾನೆ. ಮುದ್ದು ಮುದ್ದಾಗಿ ಮಾತನಾಡುತ್ತ, "ನಾನು ಒಂದು ವಸ್ತು ಕೇಳುತ್ತೇನೆ, ಕೊಡುತ್ತೀಯಾ?" ಎಂದು ಕೇಳುತ್ತಾನೆ. "ಮಗು ನಿನಗೆ ಇಲ್ಲವೆನ್ನುತ್ತೇನೆಯೇ? ನೀನು ಏಷ್ಟೇ ಕೇಳಿದರೂ, ಏನನ್ನು ಕೇಳಿದರೂ ಕೊಡುತ್ತೇನೆ". ಎಂದು ತಂದೆ ನುಡಿದ. ಆಗ ಮಗುವು, "ನೀನು ಕ್ಷೌರ ಮಾಡಿಕೊಳ್ಳುತ್ತಿದ್ದೀಯಲ್ಲ ಆ ರೇಜರ್ ಕೊಡು" ಎಂದು ಕೇಳಿತು. "ಇಲ್ಲ ಇಲ್ಲ, ಅದನ್ನು ಮಾತ್ರ ಕೊಡಲಾರೆ ಎಂದು ತಂದೆ ನುಡಿದ. "ಹಾಗಾದರೆ ನಿನಗೆ ನನ್ನ ಮೇಲೆ ಪ್ರೀತಿ ಇಲ್ಲವೆಂದಾಯಿತು. ನನಗೆ ಇಷ್ಟು ಸಣ್ಣ ವಸ್ತುವನ್ನೂ ಕೊಡಲಾರೆಯಾ?" ಎಂದು ಮಗುವು ತನ್ನ ತಂದೆಯೊಡನೆ ಮುನಿಸಿಕೊಂಡು ದುಃಖಿಸುತ್ತ ತಾಯಿಯ ಬಳಿಗೆ ದೂರನ್ನೊಯ್ದಿತು. "ಅಪ್ಪನಿಗೆ ನನ್ನ ಮೇಲೆ ಪ್ರೀತಿಯೇ ಇಲ್ಲ. ಇಷ್ಟು ದೊಡ್ಡ ಶ್ರೀಮಂತನಾಗಿಯೂ ನನಗೊಂದು ಚಿಕ್ಕವಸ್ತುವನ್ನು ಕೊಡಲಿಲ್ಲ" ಎಂದು ತಂದೆಯನ್ನು ದೂಷಿಸಿತು. ತಾಯಿ ಸಮಾಧಾನ ಮಾಡಿ ಹೇಳಿದಳು. "ಮಗು ನಿನ್ನ ಮೇಲೆ ಅಪ್ಪನಿಗೆ ಪ್ರೀತಿ ಇಲ್ಲವೆಂದಲ್ಲ, ಪ್ರೀತಿಯು ಇರುವುದಕ್ಕೇ ಕೊಡಲ್ಲ ಎಂದಿರುವುದು" ಮಗುವಿಗೆ ಆಶ್ಚರ್ಯವಾಯಿತು. "ನೋಡು ರೇಜರ್‌ನಲ್ಲಿ ಹರಿತವಾದ ಬ್ಲೇಡ್ ಇರುತ್ತೆ. ನಿನಗಿನ್ನೂ ಅದರ ಉಪಯೋಗ ತಿಳಿದಿಲ್ಲ, ಉಪಯೋಗಿಸುವ ವಯಸ್ಸೂ ಅಲ್ಲ. ಕೊಟ್ಟರೆ ಏನಾದರೂ ಅಪಾಯ ಮಾಡಿಕೊಳ್ಳಬಹುದೆಂದೇ ಕೊಟ್ಟಿಲ್ಲ".

ದೇವರು ಮಹಾದಾನಿ, ಕರುಣಾಕರ ಎಂಬ ನಂಬಿಕೆ ನಮಗೆ, ಬೇಕಾದುದೇನನ್ನೋ ಬೇಡುತ್ತೇವೆ. ಅದು ಕೊಡಲ್ಪಡುವುದಿಲ್ಲ, ಆಗ ದೇವರ ಬಗ್ಗೆ ಅವಿಶ್ವಾಸ ತಾಳಿ ಬಿಡುತ್ತಾನೆ ಅಲ್ಪಬುದ್ಧಿಯ ಈ ಮಾನವ. ಆದರದು ನಮ್ಮ ಒಳ್ಳೆಯದಕ್ಕೇ ಎಂದು ಭಾವಿಸಬೇಕು. ಒಬ್ಬ ಲೆಕ್ಕವಿಲ್ಲದಷ್ಟು ಹಣ ಸಂಗ್ರಹವಾದ ಮನುಷ್ಯ. ಕೀರ್ತಿಯ ಆಸೆಯಿಂದ ಎಲ್ಲೆಲ್ಲಿಗೋ ದುಡ್ಡು ಚೆಲ್ಲುತ್ತಾನೆ. ಬಸವ ಪುತ್ಥಳಿಗೆ ಏನನ್ನಾದರೂ ಕೇಳಬೇಕು ಎಂದು ಕೆಲವರು ಹೋದರು. ಏನು ಮಾಡಿದರೂ ಏಷ್ಟೂ ಕೊಡಲಿಲ್ಲ, ಕೇಳ ಹೋದವರೆಲ್ಲ ನೊಂದುಕೊಂಡರು. ಅವರನ್ನು ನಾನು ಸಮಾಧಾನ ಮಾಡಿದೆ.

ನಂತರ ಆತನ ಬಗ್ಗೆ ಪುಂಖಾನುಪುಂಖವಾಗಿ ಪತ್ರಿಕೆಗಳಲ್ಲಿ ಲೇಖನಗಳು ಬಂದವು. ಆತ ಎಷ್ಟು ಮನೆಗಳನ್ನು ಕೆಡವಿ, ಕುಟುಂಬಗಳನ್ನು ವಿನಾಶದ ಅಂಚಿಗೆ ಚೆಲ್ಲಿ ಹಣವನ್ನು ಸಂಪಾದನೆ ಮಾಡಿದ್ದಾನೆ ಎಂಬ ಬಗ್ಗೆ ಆಗ ಅನ್ನಿಸಿತು, "ಯಾರೋ ದೊಡ್ಡ ಶ್ರೀಮಂತರೆಂದು ತಿಳಿದು ಅವರಿಂದ ದೇಣಿಗೆ ನಿರೀಕ್ಷಿಸುತ್ತೇವೆ. ಅವರ ಹಣದಲ್ಲಿ ಪುಣ್ಯದ ಅಂಶ ಇಲ್ಲದಿದ್ದರೆ ಅದು ಪವಿತ್ರ ಕಾರ್ಯಕ್ಕೆ ಸಲ್ಲದು. ಕಬ್ಬಿಣವಾದರೆ ಮಾತ್ರ ಮ್ಯಾಗ್ನೆಟ್‌ಗೆ ಅಂಟಿಕೊಳ್ಳುವಂತೆ, ಪುಣ್ಯದ ಅಂಶವಿದ್ದರೆ ಮಾತ್ರ ಪವಿತ್ರಕಾರ್ಯಕ್ಕೆ ಸಲ್ಲುತ್ತದೆ.

ಹೀಗೆಂದು ಭಾವಿಸಿ ಯಾರಿಗೂ ಕೆಡುಕು ಬಯಸದ ಮನಸ್ಥಿತಿಯನ್ನು ಶರಣರು ಬೆಳಸಿಕೊಳ್ಳಬೇಕು.

2. ಅಲ್ಲಿ ಉಂಬರೆ ಸಂಗ ಇಲ್ಲಿ ಉಂಬರೆ ಸಂಗ

ಗುರುಬಸವಣ್ಣನವರ ಜೀವನದಲ್ಲಿ ಮಹತ್ವಪೂರ್ಣ ಘಟನೆಯೊಂದು ನಡೆಯುತ್ತದೆ. ಒಂದು ದಿವಸ (ರಾಜಕೀಯ ಪ್ರೇರಿತ) ಕಳ್ಳರು ಮಹಾಮನೆಯ ಗೋವುಗಳು ಮೇಯಲು ಹೋದಾಗ

ಅವನ್ನು ಕದ್ದು ಒಯ್ಯುತ್ತಾರೆ. ಗೋಪಾಲರು ಗಾಬರಿಯಿಂದ ಓಡಿ ಬರುತ್ತಾರೆ. ಸಂಗತಿ ತಿಳಿದ ಕೆಲವರು ಸೈನ್ಯವನ್ನು ಕಳಿಸಿರಿ ಎನ್ನುತ್ತಾರೆ. ಗುರುಬಸವಣ್ಣನವರು ಶಾಂತವಾಗಿ, "ಆಕಳ ಕಳ್ಳರು ಕೊಂಡೊಯ್ದರು ಎನ್ನದಿರಿಂ ಭೋ, ಮೊಬ್ಬಿಡದಿರಿಂ ಭೋ, ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ" ಎಂದು ಹೇಳಿ, ಮಹಾಮನೆಯಲ್ಲಿದ್ದ ಕರುಗಳನ್ನು ಅವುಗಳ ತಾಯಿ ಹಸುಗಳಿದ್ದ ಕಳ್ಳರ ಮನೆಗೆ ಬಿಟ್ಟುಬರಲು ಹೇಳುತ್ತಾರೆ. ಅದೇ ರೀತಿ ಸೇವಕರು ಕಳ್ಳರನ್ನು ಬಂಧಿಸದೆ ಕರುಗಳನ್ನು ತಂದು ಬಿಟ್ಟಾಗ ಕಳ್ಳರು ಪರಿವರ್ತನೆಗೊಳ್ಳುತ್ತಾರೆ. ಪಶ್ಚಾತ್ತಾಪದ ಕಣ್ಣೀರು ಹಾಕಿ ಪರಿವರ್ತನೆಗೊಂಡು ಬಂದು ಗುರುಬಸವಣ್ಣನವರ ಪಾದಕ್ಕೆರಗುತ್ತಾರೆ.

"ಅಲ್ಲಿ ಉಂಬರೆ ಸಂಗ ಇಲ್ಲಿ ಉಂಬರೆ ಸಂಗ"– ಇದು ನಿತ್ಯ ಜೀವನದಲ್ಲಿ ಎಲ್ಲರಿಗೂ ಬೇಕಾಗುವ ಸೂತ್ರ, ಇದು ಚಿತ್ತ ಸಮತೆಯನ್ನು ಕಲಿಸುತ್ತದೆ, ಶಾಂತ ಮನಸ್ಥಿತಿಯನ್ನು ಬೆಳೆಸುತ್ತದೆ. ಉದ್ವಿಗ್ನತೆಗೆ ಮಾನಸಿಕ ಒತ್ತಡಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಒಂದು ಚಿಕ್ಕ ಆಸ್ತಿಗಾಗಿ ಅಣ್ಣ ತಮ್ಮಂದಿರು ಕೋರ್ಟಿಗೆ ಹೋಗಿ ಹತ್ತಾರು ವರ್ಷಗಳನ್ನು, ಅಮೂಲ್ಯ ಸಂಪತ್ತನ್ನು ಕಳೆದುಕೊಳ್ಳುವರು. ಸ್ವತಂತ್ರವಾಗಿ ದುಡಿದರೆ ಅದಕ್ಕಿಂತ ಹೆಚ್ಚು ಗಳಿಸುವಂತೆ ಇದ್ದರೂ ಪ್ರತಿಷ್ಠೆಗಾಗಿ ಬಡಿದಾಡುವರು. ಅಂತಹವರಿಗೆ ಗುರುಬಸವಣ್ಣನವರ ಈ ಸೂತ್ರ ಬಹುದೊಡ್ಡ ಮಾರ್ಗದರ್ಶಿ.

3. ತಪ್ಪು ಹುಡುಕುವುದರಲ್ಲಿ ಎಲ್ಲರೂ ಮುಂದು

ಒಬ್ಬ ಕಲಾಸಕ್ತ ಸಾಧಕನಿದ್ದ. ಬಾಲ್ಯದಿಂದಲೂ ಚಿತ್ರಕಲೆಯನ್ನು ಕಲಿಯುವ ಅದಮ್ಯ ಆಕಾಂಕ್ಷೆ ಅವನದು. ಅವನ ಅಪೇಕ್ಷೆಯಂತೆ ಅವನ ತಾಯಿತಂದೆಯರು ಉತ್ತಮ ಚಿತ್ರಕಾರನೊಬ್ಬನ ಬಳಿ ಕಲಿಯಲು ಮಗನನ್ನು ಬಿಟ್ಟರು. ಕೆಲವೇ ವರ್ಷಗಳಲ್ಲಿ ಆತ ಪರಿಣಿತ ಕಲಾವಿದನಾದ.

ಅವನು ಒಂದು ಸುಂದರ ತೈಲಚಿತ್ರವನ್ನು ಬರೆದ. ಅದನ್ನು ಒಂದು ಎತ್ತರವಾದ ಸ್ಥಳದಲ್ಲಿ ಸರ್ಕಲದಲ್ಲಿ ಇಟ್ಟು ಪಕ್ಕದಲ್ಲಿ ಒಂದು ಸೂಚನಾಫಲಕ ಬರೆದು ಹಾಕಿದ. "ಕಲಾಭಿಮಾನಿಗಳೇ ನಾನೊಬ್ಬ ಉದಯೋನ್ಮುಖ ಕಲಾವಿದ. ನನ್ನ ಚಿತ್ರದಲ್ಲಿ ಏನು ದೋಷವಿದೆ ಗುರುತಿಸಿ, ಆ ಜಾಗದಲ್ಲಿ ಒಂದು ಕತ್ತರಿ ಗುರುತು ಹಾಕಿರಿ. ತಿದ್ದಿಕೊಳ್ಳುತ್ತೇನೆ".

ಮರುದಿನ ನೋಡಿದ, ಚಿತ್ರದ ತುಂಬ ಕತ್ತರಿ ಗುರುತುಗಳು. ಖಿನ್ನನಾಗಿ ತನ್ನ ಕಲಾಪ್ರತಿಭೆ ಶೂನ್ಯ ಎಂದು ನಿರಾಶನಾಗಿ ಗುರುವಿನ ಬಳಿಗೆ ಹೋಗಿ ದುಃಖಿಸಿದ. "ನೋಡಿ ಗುರುಗಳೇ, ಚಿತ್ರವನ್ನು ಬರೆ", ಒಂದು ವಾರದೊಳಗೆ ಇನ್ನೊಂದು ಚಿತ್ರವನ್ನು ಬರೆದ. ಆಗ ಗುರುವು ಸೂಚನಾ ಫಲಕ ಹೀಗೆ ಬರೆದಿಡಲು ಹೇಳಿದ "ಕಲಾಭಿಮಾನಿಗಳೇ, ನಾನು ಬರೆದ ಚಿತ್ರದಲ್ಲಿ ಏನು ದೋಷವಿದೆ ಕಂಡು ಹಿಡಿದು, ಇಟ್ಟಿರುವ ಬಣ್ಣ ಮತ್ತು ಕುಂಚದಿಂದ ಸರಿಪಡಿಸಿರಿ". ಫಲಕವನ್ನು ಚಿತ್ರದ ಮಗ್ಗುಲಲ್ಲಿ ಇಟ್ಟ, ಮರು ದಿವಸ ನೋಡಿದರೆ ಯಾರ್ಯಾರೂ ತಿದ್ದಲು ಹೋಗಿರಲಿಲ್ಲ. ಆಗ ಗುರುವು ಹೇಳಿದ, "ಸುಮ್ಮ ಸುಮ್ಮನೆ ತಪ್ಪನ್ನು ಹುಡುಕುವುದು ಮನುಷ್ಯ ಸಹಜ ಗುಣ. ನಾವಾಗಿಯೇ ದೋಷವನ್ನು ತೋರಿಸಿರಿ ಎಂದರೆ ಸುಮ್ಮನೇ ಬಿಟ್ಟಾರೆಯೇ? ಏನೂ ಗೊತ್ತಿಲ್ಲದವರೂ ಏನಾದರೂ ಒಂದು ಸೂಚಿಸುವರು. ನಮ್ಮ ಅಂತರಾತ್ಮಕ್ಕೆ ತೃಪ್ತಿಯಾಗುವುದು ಮುಖ್ಯ. ಸರಿಪಡಿಸಲು ಯಾರೂ ಮುಂದಾಗಲಿಲ್ಲ ನೋಡು".

"ಲಿಂಗದೇವ" ಎಂಬ ದೇವರ ಪರಿಕಲ್ಪನೆ ಕುರಿತಾದ ಪ್ರಸಂಗದಲ್ಲೂ ಅಷ್ಟೆ. ಒಂದು ವಚನವನ್ನೂ ಓದದವರು, ಗುರುಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ದೇವರ ಸ್ವರೂಪ ಅರಿಯದವರು, ಮಂತ್ರಾಲಯಕ್ಕೆ ಬರಿಗಾಲಲ್ಲಿ ಪಾದಯಾತ್ರೆ ಹೋಗುವ ಕೆಲವರು, ಶ್ರೀಶೈಲಕ್ಕೆ ಕಂಬಿ ಹೊರುವವರು ಇತ್ಯಾದಿ ರಸ್ತೆ ಕಾಳಗಕ್ಕೆ ಇಳಿದರು. ತಮಗೆ ಗೊತ್ತಿರಲಿ ಬಿಡಲಿ ತಾವು ಬುದ್ಧಿವಂತರೆಂಬಂತೆ ದೋಷವನ್ನು ಹುಡುಕುವುದರಲ್ಲಿ ಜನರು ಬಹಳ ಮುಂದು.

2. ತಾಯಿ ಮತ್ತು ಜೀವನ ಶಿಕ್ಷಣ

ಮಕ್ಕಳ ಜೀವನವನ್ನು ರೂಪಿಸುವಲ್ಲಿ ತಾಯಿ ತಂದೆ ಉಭಯತರ ಪಾತ್ರವು ಬಹು ಹಿರಿದು. ಅದರಲ್ಲೂ ತಾಯಿಯ ಪಾತ್ರ ಅತಿ ಮುಖ್ಯ. ಹಾಲುಣಿಸುವುದರಿಂದ ಹಿಡಿದು ಬಾಯಿ ತುತ್ತು, ಕೈ ತುತ್ತು ನೀಡುತ್ತ ಜೊತೆಜೊತೆಗೇ ಅನೇಕ ಕಥೆಗಳನ್ನು ಹೇಳುತ್ತಾ ನೀತಿಪಾಠವನ್ನು, ಆದರ್ಶ ಮೌಲ್ಯಗಳನ್ನು ತಲೆಯಲ್ಲಿ ತೂರಿಸುವ ಮಹತ್ವಪೂರ್ಣ ಪಾತ್ರವನ್ನು ತಾಯಿ ನಿರ್ವಹಿಸುವಳು.

[ಬಾಲ್ಯದ ನೆನಪುಗಳು ನನಗೆ ಬಹಳಷ್ಟು ಉಳಿದಿಲ್ಲವಾದರೂ ತಾಯಿಯವರು ಆದರ್ಶವಂತರ ಕಥೆಗಳನ್ನು ಹೇಳುತ್ತಿದ್ದುದು ನಾವು ವಿಧೇಯತೆ ಕುತೂಹಲಗಳಿಂದ ಕೈಕಟ್ಟಿ ಕುಳಿತು ಕೇಳುತ್ತ ಸಂತೋಷ ಪಡುತ್ತಿದ್ದುದು, ದುಃಖದ ಪ್ರಸಂಗ ಹೇಳಿದಾಗ ಅಳುತ್ತಿದ್ದುದು ಇನ್ನೂ ನೆನಪಿದೆ. ಆಗ ಕೇಳಿದ ಹೇಮರೆಡ್ಡಿ ಮಲ್ಲಮ್ಮ, ಭಕ್ತ ಧ್ರುವ, ಝಾನ್ಸಿರಾಣಿ ಇತ್ಯಾದಿ ಇತ್ಯಾದಿ ಕಥೆಗಳು ಮನಸಿನಲ್ಲಿ ಅಚ್ಚೊತ್ತಿ ಬಿಟ್ಟವು]

ಮಗು ಅಥವಾ ವ್ಯಕ್ತಿಯ ಬೆಳವಣಿಗೆಯಲ್ಲಿ ಮಹತ್ವಪೂರ್ಣ ಸಂಗತಿಗಳೆಂದರೆ

1. ಅನ್ನಪಾನಾದಿಗಳ ಉಪಚಾರ
2. ಉತ್ತಮ ಶಿಕ್ಷಣ
3. ಆದರ್ಶ ಮೌಲ್ಯಗಳ ಅಳವಡಿಕೆ

ತಾಯಿ/ತಂದೆ ಅವಿದ್ಯಾವಂತರಿದ್ದರೆ ಮಕ್ಕಳಿಗೆ ಉಣ್ಣಿಸಿ, ತಿನ್ನಿಸಿ, ಉಪಚಾರ ಮಾಡಬಹುದೇ ವಿನಾ ಜೊತೆಗೆ ಕುಳಿತು ಶಿಕ್ಷಣ ಕೊಡಲಾರರು. ಶಿಕ್ಷಣ ಕೊಡಲು ಆಗದಿದ್ದರೂ ಮಕ್ಕಳು ಓದಿ ವಿದ್ಯಾವಂತರಾಗಲು ಪ್ರೇರಣೆ, ಪ್ರೋತ್ಸಾಹ ನೀಡುವುದರ ಜೊತೆಗೆ ಆದರ್ಶ ಮೌಲ್ಯಗಳನ್ನು ಮಕ್ಕಳಿಗೆ ಬೋಧಿಸಬಹುದು. ತಾಯಿ/ತಂದೆ ತಾವು ವಿದ್ಯಾವಂತರಿದ್ದು ಎಳೆವರೆಯದಿಂದಲೇ ಕುಳಿತು ಓದಿಸುವುದಲ್ಲದೆ ಮಕ್ಕಳ ಆಹಾರ–ವಿಹಾರಗಳ ಕಡೆಗೂ ಗಮನಕೊಟ್ಟು, ಆದರ್ಶ ಮೌಲ್ಯಗಳನ್ನು ಬಿತ್ತುವುದು ಸರ್ವೋತ್ತಮ. ಕೇವಲ ಆಹಾರ–ವಿಹಾರಕ್ಕೆ, ಲೌಕಿಕ ಶಿಕ್ಷಣಕ್ಕೆ ಮಹತ್ವಕೊಟ್ಟು ಆದರ್ಶ ಮೌಲ್ಯಗಳನ್ನು ಬಿತ್ತದಿರುವುದು ಮಧ್ಯಮ.

ಕಲವು ತಾಯಿ/ತಂದೆಯರು ಪಾಶ್ಚಿಮಾತ್ಯ ಸಂಸ್ಕೃತಿಗೆ, ವಿಲಾಸಿ ಜೀವನಕ್ಕೆ ಮಾರುಹೋದವರು ಶಾರೀರಿಕವಾಗಿ ಮಕ್ಕಳನ್ನು ಹೆತ್ತರೂ ಅವರ ಲಾಲನೆ ಪಾಲನೆಯಲ್ಲಾಗಲೀ ಶಿಕ್ಷಣ ಕೊಡುವುದರಲ್ಲಾಗಲಿ ಆಸಕ್ತಿ ವಹಿಸುವುದೇ ಇಲ್ಲ. ಇನ್ನು ಆದರ್ಶಮೌಲ್ಯಗಳ ಬೋಧೆ ಎಲ್ಲಿಂದ ಬರಬೇಕು? ಅಂಥ ತಾಯಿ/ತಂದೆಯರದು ಹೊಣೆಗಾರಿಕೆಯಿಲ್ಲದ ಅಧಮ ತರಹದ್ದು, ಅವರಿಗಿಂತಲೂ ಅವಿದ್ಯಾವಂತರು, ಬಡವರು ಇದ್ದರೂ ಪರವಾಗಿಲ್ಲ ಆದರ್ಶ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತಿ ಬೆಳೆಸುವವರೇ ಉತ್ತಮರು. ಅಧಮ ಪ್ರವೃತ್ತಿಯ ತಾಯಿತಂದೆಯರ ಮಕ್ಕಳು ಮಾತಾಪಿತೃಗಳಿದ್ದೂ ಸಹ ಅನಾಥರು! ಅಂಥ ಮಾತಾಪಿತೃಗಳು ಮಗುವಿನ ಶತ್ರುಗಳು.

ಅನಾಥಾಲಯಗಳು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಅನಾಥಾಲಯಗಳನ್ನು ಕೆಳಕಂಡ ಸ್ಥಳಗಳಲ್ಲಿ ನಡೆಸುತ್ತಲಿದೆ.

1. ಕೂಡಲ ಸಂಗಮದ ಮಹಾಮನೆ ಮಹಾಮಠದಲ್ಲಿ
2. ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ
3. ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ
4. ಬೀದರಿನ ಬಸವ ಮಂಟಪದಲ್ಲಿ, ಆಸಕ್ತರು ಸಂಪರ್ಕಿಸಿರಿ.

****

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮುತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010


ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.10-3-2010

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010


CPMG/KA/BGW/50/2009-2011-WPP(W)-17 R.No.










ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು